ಬೆಲೆ ರೂ.2.50
D.O.P - 15th of every month at Udupi Sorting Office


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ – 15 ನವಂಬರ್ 2016

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-16 ಸಂಚಿಕೆ-11 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಉಡುಪಿಯಲ್ಲಿ ನಾಡಹಬ್ಬದ ಸಂಭ್ರಮ





ತಾ.11-10-2016ನೇ ಮಂಗಳವಾರ ಶ್ರೀಶಾರದಾ ಮಂಟಪದಲ್ಲಿ ನಾಡಹಬ್ಬವಾದ ವಿಜಯದಶಮಿಯನ್ನು ಸಂಭ್ರಮದಿಂದ ಆಚರಿಸಲಾಯಿತು. ಶ್ರೀ ಶಾರದಾ ದೇವಸ್ಥಾನದಲ್ಲಿ ನವರಾತ್ರಿಯ ಅಂಗವಾಗಿ ಒಂಭತ್ತು ದಿನಗಳ ಕಾಲ ಅವಿರತವಾಗಿ ನಡೆದ ಭಜನೆ, ಪಠಣೆ, ಪಾರಾಯಣ, ಸೇವೆ, ಪೂಜೆ ಪುನಸ್ಕಾರಗಳಾದಿಯಾಗಿ ನಡೆದ ವಿವಿಧ ಧಾರ್ಮಿಕ ಕಾರ್ಯಕ್ರಮಗಳ ಕೊನೆಯ ಹಂತವೇ ವಿಜಯದಶಮಿಯಂದು ನಡೆಯುವ ಚಂಡಿಕಾಯಾಗ. ಇದರ ಹಿಂದಿನ ದಿನ ವಾಡಿಕೆಯಂತೆ ಸಂಘದ ಪದಾಧಿಕಾರಿಗಳು ಗ್ರಾಮದೇವರಾದ ಕಡಿಯಾಳಿ ಶ್ರೀ ಮಹಿಷಮರ್ದಿನಿ ದೇವಸ್ಥಾನದಲ್ಲಿ ಹಣ್ಣುಕಾಯಿ ಫಲಪುಷ್ಪ ಸಮರ್ಪಿಸಿ ಬಂದಿದ್ದರು. ಮುಂಜಾನೆ ಏಳು ಗಂಟೆಗೆ ಬ್ರಹ್ಮಶ್ರೀ ಜಗದೀಶ ಉಪಾಧ್ಯರ ಪೌರೋಹಿತ್ಯದಲ್ಲಿ ಶ್ರೀದೇವಿಯ ಸಮ್ಮುಖದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ವೈ.ಭುವನೇಂದ್ರರಾವ್ ಹಾಗೂ ಶ್ರೀಮತಿ ಜಯಶ್ರೀ ದಂಪತಿಗಳು, ಉಪಾಧ್ಯಕ್ಷರಾದ ಶ್ರೀ ವೈ.ಸುದರ್ಶನರಾವ್, ಶ್ರೀ ಎಸ್.ಎಂ.ರಾವ್, ಕಾರ್ಯದರ್ಶಿ ಶ್ರೀ ಕೆ. ಸುರೇಶ ರಾವ್, ಶ್ರೀ ವಸಂತರಾವ್ ಕರಂಬಳ್ಳಿ ಹಾಗೂ ಇತರ ಸದಸ್ಯರು ಹಾಗೂ ಸಮಾಜ ಬಾಂಧವರೆಲ್ಲರೂ ಸಮಾಜದ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸಿ ದೀಪವನ್ನು ಪ್ರಜ್ವಲಿಸಿ ಕಾರ್ಯಕ್ರಮವನ್ನು ಆರಂಭಿಸಿದರು. ಶ್ರೀ ವೈ. ಭುವನೇಂದ್ರರಾವ್ ಹಾಗೂ ಶ್ರೀಮತಿ ಜಯಶ್ರೀ ದಂಪತಿಗಳು ಸಂಘದ ಪರವಾಗಿ ಚಂಡಿಕಾಹೋಮದ ಕರ್ತೃವಾಗಿ ವಿಧಿವಿಧಾನಗಳನ್ನು ಪೂರೈಸಿ ಸಹಕರಿಸಿದರು. ಸುಮಾರು ಹನ್ನೆರಡು ಗಂಟೆಗೆ ಮಂಗಳಾರತಿಯಾಗಿ ಯಜ್ಞೇಶ್ವರನಿಗೆ ಪೂರ್ಣಾಹುತಿಯನ್ನು ಸಮರ್ಪಿಸಲಾಯಿತು. ಮಹಿಳಾವೇದಿಕೆಯ ಸದಸ್ಯರು ಲಲಿತಾ ಸಹಸ್ರನಾಮ, ಸೌಂದರ್ಯ ಲಹರಿ ಹಾಗೂ ಕನಕಧಾರಾ ಸ್ತೋತ್ರಗಳನ್ನು ಪಠಿಸಿದರು. ಸ್ವಾಧ್ಯಾಯ ತಂಡದವರು ಪಾರಾಯಣ ಮಾಡಿದರು.

ಇತ್ತ ಶ್ರೀ ಶಾರದಾ ವೇದಿಕೆಯ ಕಾರ್ಯಕರ್ತರಿಂದ ವಿಳಾಸಪುಸ್ತಕವನ್ನು ಸಂಪೂರ್ಣಗೊಳಿಸುವುದಕ್ಕಾಗಿ, ಆಗಮಿಸಿದ್ದ ಸಮಾಜಬಾಂಧವರಿಂದ ವಿಳಾಸ ಹಾಗೂ ಮಾಹಿತಿ ಸಂಗ್ರಹಣೆಯ ಕೆಲಸವು ಚುರುಕಾಗಿ ನಡೆಯಿತು. ಅತ್ತ ಕಲೆ ಹಾಗೂ ಸಾಂಸ್ಕೃತಿಕ ವೇದಿಕೆಯಿಂದ ವಿಶೇಷವಾಗಿ ಮಕ್ಕಳು ಹಾಗೂ ಮಹಿಳೆಯರಿಗಾಗಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳು ಜರುಗಿದವು. ಈ ಕಾರ್ಯಕ್ರಮವನ್ನು ಸಂಘದ ಪೂರ್ವಾಧ್ಯಕ್ಷರಾದ ಡಾ| ಪಿ. ವಿಠಲ್ ರಾವ್ ಉದ್ಘಾಟಿಸಿದರು.

ಪೂರ್ಣಾಹುತಿಯ ನಂತರ ಸಭಾ ಕಾರ್ಯಕ್ರಮವು ಆರಂಭವಾಯಿತು. ಇದರ ಅಧ್ಯಕ್ಷತೆಯನ್ನು ಶ್ರೀ ವೈ.ಭುವನೇಂದ್ರ ರಾಯರು ವಹಿಸಿದ್ದರು. ಅತಿಥಿಗಳಾಗಿ ಮಂಗಳೂರಿನ ಕೆನರಾ ಇಂಜಿನಿಯರಿಂಗ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್ ಹಾಗೂ ಉಡುಪಿ ಕೆಮ್ಮಣ್ಣಿನ ಸರಕಾರಿ ಕಾಲೇಜಿನ ಪ್ರಾಂಶುಪಾಲೆ ಶ್ರೀಮತಿ ಪದ್ಮಾಕ್ಷಿ ಆಗಮಿಸಿದ್ದರು. ಸಭೆಯು ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಡಾ| ವೈ. ಸುದರ್ಶನ ರಾಯರು ಅತಿಥಿಗಳನ್ನು ಸಭೆಗೆ ಪರಿಚಯಿಸಿ ಕಾರ್ಯಕ್ರಮಕ್ಕೆ ಎಲ್ಲರನ್ನು ಸ್ವಾಗತಿಸಿದರು. ಅಂದಿನ ದಿನದ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಉದಯಚಂದ್ರ ಹಾಗೂ ಶ್ರೀ ಅಂಬಲಪಾಡಿ ಕೃಷ್ಣರಾವ್ ಪುರಸ್ಕಾರ ವಿಜೇತರಿಗೆ ಸನ್ಮಾನ ಕಾರ್ಯಕ್ರಮವು ಅತಿಥಿಗಳಿಂದ ನೆರವೇರಿತು. ಪ್ರೊ| ಟಿ. ನಾರಾಯಣ ಶ್ಯಾನುಭಾಗರು ಜ್ಞಾನ, ಪರಿಶ್ರಮ, ಕೌಶಲ್ಯ ಹಾಗೂ ಸಂಘಟನೆಗಳಿಂದಾಗಿ ಬ್ರಾಹ್ಮಣ ಸಮಾಜವು ಈಗಲೂ ಮುಂಚೂಣಿಯಲ್ಲಿದೆ ಎಂದರು. ಶ್ರೀಮತಿ ಪದ್ಮಾಕ್ಷಿಯವರು ಮಕ್ಕಳು ಓದು ಪಾಠಗಳೊಂದಿಗೆ ಕಲೆ ಕ್ರೀಡೆಗಳಂತಹಾ ಪಠ್ಯೇತರ ವಿಷಯಗಳಲ್ಲೂ ಪ್ರಾವೀಣ್ಯತೆ ಸಾಧಿಸಿದರೆ ಮಾತ್ರ ಅವರ ವಿದ್ಯೆ ಪರಿಪೂರ್ಣವಾಗುತ್ತದೆಯೆಂದರು. ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ವೈ.ಭುವನೇಂದ್ರರಾಯರು ಶಾರದಾ ಮಂಟಪದಲ್ಲಾಗುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಉಲ್ಲೇಖಿಸಿದರು. ನವರಾತ್ರಿಯ ಹಾಗೂ ವಿಜಯದಶಮಿಯ ಕಾರ್ಯಕ್ರಮಗಳ ಯಶಸ್ಸಿಗೆ ಕಾರಣೀಭೂತರಾದ ಎಲ್ಲಾ ಕಾರ್ಯಕರ್ತರನ್ನು ಅಭಿನಂದಿಸಿದರು. ಕೊನೆಯಲ್ಲಿ ಶ್ರೀ ಐ.ಕೆ.ಜಯಚಂದ್ರರವರು ಧನ್ಯವಾದವಿತ್ತರು. ಶ್ರೀ ಹೆರ್ಗ ನಿರಂಜನ ರಾಯರು ಕಾರ್ಯಕ್ರಮವನ್ನು ನಿರ್ವಹಿಸಿದರು. ಶ್ರೀ ವಸಂತರಾವ್ ಕರಂಬಳ್ಳಿ ರವರು ವೇದಿಕೆಯಲ್ಲಿ ಸಹಕರಿಸಿದರು.

## ಯುವ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ

### ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2017

2017ರ ಜನವರಿ ತಿಂಗಳಲ್ಲಿ ನಡೆಯಲಿದೆ.

ಆಸಕ್ತ ತಂಡಗಳು ಮೆನೇಜರ್ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು (Ph : 0820-2520754), ವಸಂತ ರಾವ್ ಕರಂಬಳ್ಳಿ (M : 9632291183), ಉಂಡಾರು ಕೃಷ್ಣರಾಜ ರಾವ್ (M : 9164581333), ಕೆ. ಸುರೇಶ್ ರಾವ್, ಕುತ್ಪಾಡಿ (M : 9036443884) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ವಿಶೇಷ ಸೂಚನೆ :

1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ.
2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ.
3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು.
4) ಅಲೆವೂರು ದಿ| ಭುಜಂಗ ರಾವ್ ಮತ್ತು ದಿ| ಶಾಂತಾ ದೇವಿ ಸ್ಮರಣಾರ್ಥ ಅವರ ಪುತ್ರ ಅಲೆವೂರು ಶ್ಯಾಮರಾವ್ ನೀಡುವ ನಗದು ಬಹುಮಾನಗಳನ್ನು ವಿಜೇತ ತಂಡಗಳಿಗೆ ವಿತರಿಸಲಾಗುವುದು.

**ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಹಾಗೂ ಹಿರಿಯ ನಾಗರಿಕರಿಗೂ ಕ್ರಿಕೆಟ್ ಪಂದ್ಯಾಟ** ನಡೆಯಲಿದೆ. ಆಸಕ್ತ ತಂಡಗಳು ಬೆಳಿಗ್ಗೆ 9-30ಕ್ಕೆ ಹಾಜರಿರಬೇಕಾಗಿ ಅಪೇಕ್ಷೆ.
ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

– ಅಧ್ಯಕ್ಷರು ಮತ್ತು ಸಂಚಾಲಕರು, ಯುವ ಮತ್ತು ಕ್ರೀಡಾ ವೇದಿಕೆ

ಅದೇ ದಿನ ಬೆಳಿಗ್ಗೆ ಗಂಟೆ 9-00ರಿಂದ
ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀಶಾರದಾ ಮಂಟಪದಲ್ಲಿ
**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು** ಏರ್ಪಡಿಸಲಾಗಿದೆ.
**ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

– ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

# ಸಂಪಾದಕೀಯ.....

- ಡಾ| ವೈ. ಸುದರ್ಶನ್ ರಾವ್

(ಅಂತರ್ಜಾತೀಯ ವಿವಾಹದ ಬಗ್ಗೆ ಮುಂದುವರಿದ ಭಾಗ)

ವಿವಾಹವು ಹಿಂದಿನ ಕಾಲದಲ್ಲಾಗಿರಲಿ ಅಥವಾ ಇಂದೇ ಆಗಲಿ, ಅದು ಯಾವಾತ್ತೂ ಜೀವನದ ಒಂದು ಮುಖ್ಯ ಘಟ್ಟವೇ ಆಗಿತ್ತು. "ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು" ಎಂಬ ಹಳೆಯ ಗಾದೆ ಮಾತು ಆಗಿನ ಕಾಲದಲ್ಲಿ ಹೆತ್ತವರು ತಮ್ಮ ಮಕ್ಕಳಿಗೆ ವಿವಾಹ ಮಾಡುವ ವಿಷಯದಲ್ಲಿ ಎಷ್ಟು ಆತಂಕಭರಿತರಾಗಿರುತ್ತಿದ್ದರೆನ್ನುವುದನ್ನು ಸೂಚಿಸುತ್ತದೆ. ಮನೆಯಲ್ಲಿರುವ ಮದುವೆಯಾಗಬೇಕಾದ ಹೆಣ್ಣುಮಕ್ಕಳ ಸಂಖ್ಯೆಯು ಮನೆಯ ಯಜಮಾನ/ಯಜಮಾನಿಗಿರುವ ಜವಾಬ್ದಾರಿಯ ಹೊರೆಯ ಸೂಚಕವಾಗಿತ್ತು. ಮೇಲಾಗಿ ಬ್ರಾಹ್ಮಣರಿಗೆ ಕೃಷಿ ಹಾಗೂ ಪೌರೋಹಿತ್ಯವೇ ಪ್ರಧಾನ ಉದ್ಯೋಗವಾಗಿತ್ತು. ಬಡತನದೊಂದಿಗೆ ಜೀವನ ಮಟ್ಟವೇ ಸಾರ್ವತ್ರಿಕವಾಗಿ ಕಡಿಮೆ ಇದ್ದ ದಿನಗಳವು. ಹಾಗಾಗಿ ಸಮಾಜದಲ್ಲಿ ಬಾಲ್ಯವಿವಾಹ, ಹೆಣ್ಣುಮಕ್ಕಳ ವಿದ್ಯೆಯ ಅವಗಣನೆ ಸಾಮಾನ್ಯವಾಗಿತ್ತು. ಹುಡುಗಿಯರು ಕೆಲಸಕ್ಕೆ ಹೋಗುತ್ತಿದ್ದದ್ದಂತೂ ಅಪರೂಪವಾಗಿತ್ತು. ಶೈಕ್ಷಣಿಕವಾಗಿ ಆರ್ಥಿಕವಾಗಿ ಮುಂದುಬರಲು ಹೆಣ್ಣುಮಕ್ಕಳಿಗೆ ಅವಕಾಶ ಸಿಕ್ಕದೇ ಇದ್ದುದರಿಂದ ಕನ್ಯಾಪಿತೃವು ನಿಜಾರ್ಥದಲ್ಲಿ (ಕನ್ಯಾ)ದಾನ ಮಾಡುವವನಾಗಿದ್ದರೂ "ದೇಹಿ" ಸ್ಥಾನದಲ್ಲಿದ್ದ. ಆದುದರಿಂದ ಆಗ ಹೆಣ್ಣಿನ ಕಡೆಯವರು ವರನನ್ನು ಬೇಡ ಎಂದು ತಿರಸ್ಕರಿಸುವ ಸಂದರ್ಭಗಳು ಅತ್ಯಂತ ಕಡಿಮೆ ಇದ್ದವು. ಹೆಣ್ಣಿನ ಕಡೆಯವರು ಇನ್ನೂ ಉತ್ತಮ ನೆಂಟಸಿಕೆ ಕೂಡಿ ಬಂದೀತು ಎಂಬ ಕಾದು ನೋಡುವ ಪರಿಪಾಠ ಆಗ ಇದ್ದಿರಲೇ ಇಲ್ಲ.

ಆದರೆ ಈಗ, ಮನೆಗೆ ಒಬ್ಬಳೇ ಮಗ ಅಥವಾ ಮಗಳು. ಹೆಣ್ಣಾಗಲಿ ಗಂಡಾಗಲಿ ಮಕ್ಕಳು ಎರಡು ಕಣ್ಣಿದಂತೆ; ಇಬ್ಬರಿಗೂ ಸಮಾನ ಪ್ರೀತಿ. ಇಬ್ಬರಿಗೂ ವಿದ್ಯೆಯಲ್ಲಾಗಲಿ ಉದ್ಯೋಗದಲ್ಲಾಗಲಿ ಸಮಾನ ಅವಕಾಶ, ಸಮಾನ ಸ್ವಾತಂತ್ರ್ಯ. ತಂದೆ ತಾಯಂದಿರು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದು ಜೀವನ ಮಟ್ಟ ಉತ್ತಮವಾಗಿರುವಾಗ ವಿದ್ಯಾವಂತರೂ ಬುದ್ಧಿವಂತರೂ ಆಗಿರುವ ಹಾಗೂ ಮಮತೆ ವಾತ್ಸಲ್ಯಗಳಿಂದ ಜೋಪಾನ ಮಾಡಿ ಬೆಳೆಸಿದ ಮುದ್ದಿನ ತಮ್ಮ ಮಕ್ಕಳಿಗೆ ಎಲ್ಲಾ ರೀತಿಯಲ್ಲೂ ಅತ್ಯುತ್ತಮನಾದ ವರ ಅಥವಾ ವಧುವೇ ಜೀವನ ಸಂಗಾತಿಯಾಗಬೇಕೆಂಬ ಅಪೇಕ್ಷೆ ಹೆತ್ತವರಲ್ಲಿರುವುದು ಸಹಜವೇ ಆಗಿದೆ. ಅಷ್ಟು ಮಾತ್ರವಲ್ಲದೇ ಎಲ್ಲಾ ರಂಗಗಳಲ್ಲೂ ಪೈಪೋಟಿಯನ್ನೆದುರಿಸಿ ಪಕ್ವವಾಗಿರುವ ಇಂದಿನ ಕಾಲದ ಯುವಕ ಯುವತಿಯರು ತಮ್ಮ ಜೀವನ ಸಂಗಾತಿಯನ್ನು ತಾವೇ ಸ್ವತಃ ಆರಿಸುವಲ್ಲೂ ಸಮರ್ಥರಾಗಿರುವುದು ಇನ್ನೊಂದು ಗಮನಾರ್ಹ ಅಂಶ. ಅಷ್ಟು ಮಾತ್ರವಲ್ಲದೇ ನಾನಾ ಕಾರಣಗಳಿಂದ ವಿಚ್ಛೇದನಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೂಡಾ ಸಂಗಾತಿಯನ್ನು ಆರಿಸುವುವಾಗ ಹೆತ್ತವರು ಅವರ ಮಕ್ಕಳ ಇಷ್ಟಗಳನ್ನೂ ಗೌರವಿಸಲೇಬೇಕಾಗುತ್ತದೆ.

ಆದುದರಿಂದಲೇ ಅತ್ಯುತ್ತಮ ಜೀವನ ಸಂಗಾತಿಯ ಹುಡುಕಾಟದಲ್ಲಿರುವವರಿಗೆ ಜಾತಿ ಎಂಬ ಮಾನದಂಡ ಮೊದಲನೆಯ ಪ್ರಾಶಸ್ತ್ಯವನ್ನು ಈಗ ಕಳೆದುಕೊಂಡಿದೆ. ಈ ಕಾರಣಗಳಿಂದಲೇ ಜಾತಿವಾದದ ಪ್ರಬಲ ಪ್ರತಿಪಾದಕರೂ ಕೂಡಾ ತಮ್ಮ ಮಕ್ಕಳ ವಿವಾಹ ಸಂದರ್ಭ ಬಂದಾಗ ರಾಜಿ ಮಾಡಿಕೊಂಡ ಉದಾಹರಣೆಗಳನ್ನು ಕಾಣಬೇಕಾಗುತ್ತದೆ. ಇದರಲ್ಲಿ ಯಾರದ್ದೂ ತಪ್ಪಿಲ್ಲ. ಯಾರೂ ಅತೀತರಲ್ಲ. ಮನಕ್ಕೊಪ್ಪುವ ಉತ್ತಮ ಜೀವನ ಸಂಗಾತಿಯ ಆಯ್ಕೆ ವಿವಾಹವಾಗುವವರ ಹಕ್ಕು. ಅವರ ಆಕಾಂಕ್ಷೆಗಳು ನೀರ ಮೇಲೆ ತೊಂಯ್ದಾಡುವ ದೋಣಿಗಳಾಗದೇ ಸುರಕ್ಷಿತವಾಗಿ ದಡಮುಟ್ಟುವಂತೆ ಮಾಡುವುದು ಹೆತ್ತವರ ಜವಾಬ್ದಾರಿಯಾಗಿದೆ. ಕೆಲವೊಮ್ಮೆ ಅನಿವಾರ್ಯತೆಯಾಗಿರಬಹುದು. ಇದರೊಂದಿಗೆ ವೈವಾಹಿಕ ಅಂಕಣಗಳೂ ವೆಬ್ ಸೈಟುಗಳೂ ಅಂಗೈಯಲ್ಲೇ ಇರುವಾಗ, ಅಲ್ಲಿ ಆಗಿದೆ ಅಂತ ಇಲ್ಲಿಯವರು, ಇಲ್ಲಿಯಾಗಿದೆ ಎಂದು ಇನ್ನೊಂದು ಕಡೆ ಎಂದು ಎಲ್ಲರೂ ಅಂತರ್ಜಾತೀಯ ವಿವಾಹವಾಗುತ್ತಾ ಬಂದರೆ ಜಾತಿ ಎಂಬ ಸಂಘಟನೆಯು ಅಸ್ತಿತ್ವಕ್ಕೆ ಅಪಾಯ ತಪ್ಪಿದ್ದಲ್ಲ. ಕಳೆದ ಒಂದು ವರ್ಷದಲ್ಲಿ ಶ್ರೀಶಾರದಾ ಮಂಟಪದಲ್ಲಿ ನೆರವೇರಿದ ನಮ್ಮ ಸಮಾಜದ ಇಪ್ಪತ್ತು ಮದುವೆಗಳಲ್ಲಿ ಐದು ಮದುವೆ ಅಂತರ್ಜಾತೀಯವೆಂದರೆ ಈ ವಿಷಯದ ಪ್ರಾಮುಖ್ಯತೆಯ ಅರಿವಾಗುತದೆ. ಹಾಗಾದರೆ ಜಾತಿ ಎಂಬ ಸಂಘಟನೆ ನಮಗೆ ಬೇಡವೇ? ಬೇಕಾದರೆ ಯಾಕೆ?

(ಮುಂದುವರಿಯುವುದು)

**ಸಂಪಾದಕ ಮಂಡಳಿ**


ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.
-ಸಂಪಾದಕ ಮಂಡಳಿ

ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-15

-ವೈ. ಮೋಹನ ರಾವ್

## ವಿಷ್ಣುಮಂಗಲ ಶ್ರೀ ಮಹಾವಿಷ್ಣು ದೇವಸ್ಥಾನ, ಕೂಡ್ಲು, ಕಾಸರಗೋಡು





ಚಿತ್ರ : ಬಿ.ಜಯರಾಮ ರಾವ್

ಸುಮಾರು 600 ವರ್ಷಗಳ ಇತಿಹಾಸವಿರುವ ಶ್ಯಾನುಭಾಗ ಮನೆತನದ ಮೂಲ ತರವಾಡು ಮನೆಯು ವಿಷ್ಣುಮಂಗಲದಲ್ಲಿತ್ತು. ಕೂಡ್ಲು ಶ್ಯಾನುಭಾಗ ಮನೆತನವು ಗೌರವಾನ್ವಿತ ಮನೆಗಳಲ್ಲೊಂದು. ಈ ಮನೆಯನ್ನು ಸುಬ್ರಾಯ ಶ್ಯಾನುಭಾಗ್ ಮತ್ತು ಕಳೆರಿ ಸುಬ್ಬಯ್ಯರ ಕಾಲದಿಂದ ಗುರುತಿಸಬಹುದು. ಕೂಡ್ಲು ಶ್ಯಾನುಭಾಗ ಮನೆತನದ ಇತಿಹಾಸವನ್ನು ನೋಡಿದಾಗ ಅಲ್ಲಿ ವಿಕಸಿತವಾದ ವೈವಿಧ್ಯಮಯವಾದ ಪ್ರತಿಭೆಗಳು, ಸಾಧನೆಗಳು, ಸಿದ್ಧಿಗಳು ನಮ್ಮನ್ನು ಆಕರ್ಷಿಸುತ್ತವೆ.

ಕುತ್ಯಾಳವೆಂದು ಪ್ರಸಿದ್ಧವಾಗಿರುವ ಪ್ರದೇಶ ಕೂಡ್ಲು. ಇದು ಕಾಸರಗೋಡು ನಗರಕ್ಕಿಂತ ಸುಮಾರು 2 ಕಿ.ಮೀ. ವಾಯುವ್ಯದಲ್ಲಿರುವ ದೈವ ಸಾನಿಧ್ಯದ ನೆಲ. ದ್ವೈತ ಮತ್ತು ಅದ್ವೈತ ಮತಾಚಾರ್ಯರು ಪರಸ್ಪರ ಕೂಡಿ ವಾಗ್ವಾದ ನಡೆಸಿದ ಪವಿತ್ರ ಸ್ಥಳ. ದೇವತೆಗಳು ಕೂಡ ಕುತ್ಯಾಳದ ನಿಸರ್ಗವನ್ನು ಮೆಚ್ಚಿ ದೇವಲೋಕದಿಂದ ಬಂದು ಇಲ್ಲಿ ಒಂದುಗೂಡಿ ನೆಲೆಸಿರುವವರೆಂಬ ನಂಬುಗೆ ಇದೆ. ಹೀಗೆ ಸಂಗಮದ ಸಂಕೇತವಾಗಿ ಈ ಪ್ರದೇಶಕ್ಕೆ ಕೂಡಲು-ಕೂಡ್ಲು ಎಂಬುದಾಗಿ ಹೆಸರು ಬಂತೆಂದು ನಂಬುಗೆ ಇದೆ.

ಕೂಡಲು ಗ್ರಾಮದಲ್ಲಿ ಹಲವಾರು ದೇವಸ್ಥಾನಗಳಿವೆ. ಇವುಗಳಲ್ಲಿ ಅತಿ ಪುರಾತನವಾದುದೇ ವಿಷ್ಣುಮಂಗಲ ಶ್ರೀ ಮಹಾವಿಷ್ಣು ದೇವಸ್ಥಾನ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಧ್ವಜಸ್ತಂಭ ರಹಿತವಾಗಿದೆ. ಬಲಿ ಕಲ್ಲುಗಳೂ, ತುಳಸೀ ಕಟ್ಟೆಯೂ ಇಲ್ಲದೆ ಕುತೂಹಲವನ್ನುಂಟು ಮಾಡಿದೆ. ಈ ದೇವಸ್ಥಾನದ ಒಳಗಿನ ಎಡ ಗೋಪುರದಲ್ಲಿ ವೃತ್ತಾಕಾರದ ಒಂದು ಬೃಹತ್ ಹೋಮಕುಂಡವಿತ್ತು. ಇದು ಇಲ್ಲಿ ಹಿಂದೆ ವೈಭವದ ಹೋಮ, ಹವನಾದಿ ವೈದಿಕ ಕಾರ್ಯಕ್ರಮಗಳು ನಡೆಯುತ್ತಿದ್ದಿರಬಹುದು. ಪ್ರಸ್ತುತ ಇದನ್ನು ಮುಚ್ಚಲಾಗಿದೆ.

ಇಲ್ಲಿ ಮಕರ ಸಂಕ್ರಮಣದ ಹಿಂದಿನ ದಿನ ಉತ್ಸವ ಆರಂಭಗೊಳ್ಳುತ್ತದೆ. ಮರುದಿನ ಮಕರ ಸಂಕ್ರಮಣದ ಪರ್ವಕಾಲದಲ್ಲಿ ಮಧ್ಯಾಹ್ನ ಮಹಾಪೂಜೆ ಮತ್ತು ಅನ್ನಸಂತರ್ಪಣೆ, ರಾತ್ರಿ ದೀಪೋತ್ಸವ, ಉತ್ಸವ ಬಲಿ, ಕಟ್ಟಪೂಜೆ, ಸುಡುಮದ್ದು ಪ್ರದರ್ಶನ ಇತ್ಯಾದಿ ನಡೆಯುತ್ತದೆ. ಇದೇ ರೀತಿಯ ಉತ್ಸವ ಬಲಿ ಮರುದಿನ ಬೆಳಗ್ಗೆಯೂ ನಡೆಯುತ್ತದೆ. ದರುಶನ ಬಲಿ ಕಳೆದ ಮೇಲೆ ರಾಜಾಂಗಣ ಪ್ರಸಾದ. ಇಲ್ಲಿಗೆ ಉತ್ಸವ ಕೊನೆಗೊಳ್ಳುತ್ತದೆ. ಅದೇ ದಿನ ಪೂರ್ವಾಹ್ನ ದೇವಸ್ಥಾನ ಈಶಾನ್ಯ ದಿಕ್ಕಿನಲ್ಲಿ ಅತೀ ಸಮೀಪವೇ ನೆಲೆಗೊಂಡಿರುವ ಪರಮ ಕಾರಣೀಕದ ಆಲಂಗೋಡು ಧೂಮಾವತಿ ದೈವದ ಎರಡು ದಿನಗಳ ಭೂತಾರಾಧನೆ ಆರಂಭಗೊಳ್ಳುತ್ತದೆ.

ಮಹಾವಿಷ್ಣು ದೇವರ ಉತ್ಸವದಲ್ಲಿ ಉಪಯೋಗಿಸಿದ ಹೂವಿನ ಮಾಲೆ, ಗಂಧಪ್ರಸಾದಗಳನ್ನು ಸ್ವೀಕರಿಸಿ ಧೂಮಾವತಿ ಭೂತಾರಾಧನೆ, ಜತೆಗೆ ಗುಳಿಗನ ಕೋಲಗವೂ ನಡೆಯುತ್ತದೆ. ಧೂಮಾವತಿ ದೈವವು ತುಳು ಭಾಷೆಯಲ್ಲಿ ಮಾತನಾಡುತ್ತಿದ್ದರೆ, ಗುಳಿಗ ಮಲೆಯಾಳಂನಲ್ಲಿ ಭಕ್ತರೊಂದಿಗೆ ವ್ಯವಹರಿಸುತ್ತದೆ. ಮೊದಲ ದಿನ ಭೂತಾರಾಧನೆ, ದೇವಸ್ಥಾನದ ಆಡಳಿತದವರ ವತಿಯಿಂದ ನಡೆಯುತ್ತದೆ. ಎರಡನೇ ದಿನ ಭಾರೀ ಸಂಖ್ಯೆಯಲ್ಲಿ ಊರ ಮತ್ತು ಪರವೂರ ಭಕ್ತರು ಸೇರಿ ತಮ್ಮ ಹರಕೆಗಳನ್ನು ಒಪ್ಪಿಸುತ್ತಾರೆ. ಇಲ್ಲಿನ ದೈವಾರಾಧನೆಯನ್ನು 'ನಲಿಕೆದಾಯ' ಸಮುದಾಯದವರು ನಡೆಸುತ್ತಾರೆ.

ವಿಷ್ಣುಮಂಗಲದಲ್ಲಿ ವರ್ಷಾವಧಿ ಉತ್ಸವವಲ್ಲದೆ ವಿಷ್ಣುಸಂಕ್ರಮಣ, ಬಲಿಪಾಡ್ಯ, ತುಲಾಸಂಕ್ರಮಣ (ಕಾವೇರಿ ಸಂಕ್ರಮಣ)ಗಳಂದು ವಿಶೇಷ ಪೂಜೆ ನಡೆಯುತ್ತದೆ. ಎಲ್ಲಾ ಸಂಪ್ರದಾಯದವರಿಂದಲೂ ಅಂದು ರಾತ್ರಿ ಭಜನಾ ಸಂಕೀರ್ತನೆ ಮತ್ತು ಕಾರ್ತಿಕ ಪೂಜೆ ನಡೆಯುತ್ತದೆ. ಅಂದು ಧೂಮಾವತಿ ದೇವಸ್ಥಾನದಲ್ಲಿ ತಂಬಿಲ ಪೂಜೆ ನಡೆಯುತ್ತದೆ.

ಗರ್ಭಗುಡಿಯ ಹೊರಗಡೆ ಕೆಂಪು ಕಲ್ಲಿನಿಂದಲೇ ಕಂಬ, ಮಹಾದ್ವಾರಾದಿಗಳ ಶಿಲ್ಪದಂತೆ ಕಟ್ಟಲಾಗಿದೆ. ಕೃಷ್ಣ ಶಿಲೆಯ ಚತುರ್ಬಾಹು ಆಳೆತ್ತರದ ವಿಗ್ರಹವೇ ವಿಷ್ಣುಮಂಗಲ ಶ್ರೀ ಮಹಾವಿಷ್ಣು. ಶಂಖ, ಚಕ್ರ, ಗಧಾ, ಪದ್ಮಧಾರಿಯಾಗಿ ಶಿಲೆಯಲ್ಲಿಯೇ ಪ್ರಭಾವಳಿಯನ್ನು ಹೊಂದಿದೆ. ಇದು ಈ ಮೂರ್ತಿಯನ್ನು ಕಂಡಾಗ ಹೊಳೆಯುವ ಸ್ತೋತ್ರ "ಸಶಂಖ ಚಕ್ರಂ, ಸಕಿರೀಟ ಕುಂಡಲಂ। ಸಪೀತವಸ್ತ್ರಂ ಸರಹೀರು ಹೇಕ್ಷಣಮ್। ಸಹಾರ ವಕ್ಷ ಸ್ಥಲ ಕೌಸ್ತುಭಶಿಕ್ರೇಯಂ। ನಮಾಮಿ ವಿಷ್ಣುಂ ಶಿರಸಾ ಚತುರ್ಭುಜಮ್ ॥

ಹೊರಪ್ರಾಂಗಣದ ಬಲಬದಿಯಲ್ಲಿ ಪರಮಪವಿತ್ರವಾದ 'ಚಕ್ರತೀರ್ಥ'ವನ್ನೊಳಗೊಂಡ ಪುಷ್ಕರಣಿ ಇದೆ. ಇಲ್ಲಿ ನೀರು ವೃತ್ತಾಕಾರವಾಗಿ ಇರುವುದರಿಂದ ಇದನ್ನು ಚಕ್ರತೀರ್ಥ ಎಂದು ಕರೆಯುತ್ತಾರೆ. ಊರಿನ ಹಿರಿಯರ ನಂಬುಗೆಯಂತೆ ಚಕ್ರತೀರ್ಥದ ಶ್ರೀ ವಿಷ್ಣುಮಂಗಲ ದೇವಸ್ಥಾನ 'ಪಾಂಡವರ ಕಾಲಕ್ಕೆ' ಸೇರಿದುದಾಗಿದೆ.

ಕಾರ್ತಿಕ ಪೂಜೆ, ಶ್ರೀ ವಿಷ್ಣುಸಹಸ್ರನಾಮಾರ್ಚನೆ, ಕರ್ಪೂರಾರತಿ, ಹಾಲು ಪಾಯಸ, ತ್ರಿಮಧುರ, ಪುಷ್ಪಾರ್ಚನೆ, ಬಲಿವಾಡು ಇತ್ಯಾದಿ ಶ್ರೀ ದೇವರಿಗೆ ನಡೆಸಬಹುದಾದ ಸೇವೆಗಳು. ಮಹಾವಿಷ್ಣು ಶ್ವೇತವರ್ಣ ಪ್ರಿಯನೆಂಬುದು ಎಲ್ಲರ ನಂಬುಗೆ. ಆದೆ ಕಾರಣ ಕೇವಲ ಒಂದು ತುಂಬೆಯ ಹೂವನ್ನು ಅರ್ಪಿಸಿದರೂ ಮಹಾವಿಷ್ಣು ಪ್ರಸನ್ನನಾಗಿ ಭಕ್ತರನ್ನು ಹರಸುತ್ತಾನೆ. ಆದ್ದರಿಂದ ಭಕ್ತರು ಹೆಚ್ಚಾಗಿ ಬಿಳಿ ಪುಷ್ಪಗಳನ್ನು ಮಹಾವಿಷ್ಣುವಿಗೆ ಅರ್ಪಿಸುತ್ತಾರೆ.

ಪ್ರಸ್ತುತ ಶ್ರೀ ಕೆ.ಗೋಪಾಲಕೃಷ್ಣ ಶ್ಯಾನುಭಾಗರು ಕೂಡ್ಲು ದೇವಸ್ಥಾನದ ಅನುವಂಶಿಕ ಮೊಕ್ತೇಸರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
(ಸಂಘದ ಪ್ರಾಥಮಿಕ ಸದಸ್ಯರಿಗೆ 11.50%)

| | |
|---|---|
| ವಾಹನ ಸಾಲ | : 13% |
| ಹಳೆಯ ವಾಹನ | : 15% |
| ಆಭರಣ ಸಾಲ | : 13% |
| ವೈಯಕ್ತಿಕ ಸಾಲ | : 16% |
| ಶಿಕ್ಷಣ ಸಾಲ | : 13% |
| ಅಡಮಾನ ಸಾಲ | : 13% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 181 ದಿನಗಳು | : 6%, | 182 ದಿನಗಳಿಂದ 364 ದಿನಗಳು | : 7%, |
| 1 ವರ್ಷ ಮತ್ತು 2 ವರ್ಷಕ್ಕಿಂತ ಕಡಿಮೆ | : 9% | 2 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2008-09 ರಿಂದ 2014-15ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸೊಸೈಟಿಯ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಆ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

|| ಶ್ರೀ ಗುರುಭ್ಯೋ ನಮಃ || || ಶ್ರೀ ಶಾರದಾದೇವ್ಯೈ ನಮಃ ||

# ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ–2016

ಮಂಗಳೂರು

ಆತ್ಮೀಯ ಸಮಾಜ ಬಾಂಧವರೇ ತಾ. 25–09–2016

**ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠಾಧೀಶ್ವರ ಜಗದ್ಗುರು ಶಂಕರಾಚಾರ್ಯ**
**ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರ ಹಾಗೂ**
**ತತ್‌ಕರಕಮಲ ಸಂಜಾತ ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ**

ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರು ಸಂಘಟಿತರಾಗಿ ಬಗೆಬಗೆಯ ತೇಜಸ್ವೀ ಕಾರ್ಯಕ್ರಮಗಳ ಮೂಲಕ ಸಮಾಜದ ಅಭಿವೃದ್ಧಿಗೆ ತರ ತರಹದ ಕಾಣಿಕೆ ನೀಡುವ ಹಾಗೂ ಸಾಧನೆಗೈದವರನ್ನು ಪುರಸ್ಕರಿಸುವ

**ಸಾಧನಾಪಥದ ಚೇತನಗಳ ಉದ್ದೀಪನ ಮತ್ತು ಸಮಾಜದ ಇಂದಿನ ಜ್ವಲಂತ ಸಮಸ್ಯೆಗಳ ಬಗ್ಗೆ ಚಿಂತನ–ಮಂಥನ–ಮಾರ್ಗದರ್ಶನ**

ಇವೇ ಮೊದಲಾದ ಉದ್ದೇಶಗಳನ್ನು ಪೂರೈಸುವ ಆಶಯದೊಂದಿಗೆ
ತಾ.17–12–2016ನೇ ಶನಿವಾರ ಮತ್ತು ತಾ.18–12–2016ನೇ ರವಿವಾರ
**ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಸದನದಲ್ಲಿ**

## ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ–2016

ಆಯೋಜಿಸಲಾಗಿದೆ. ಈ ಸಮಾವೇಶದಲ್ಲಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ತನು–ಮನ–ಧನಗಳಿಂದ ಸಹಕರಿಸಿ, ಸಮ್ಮೇಳನವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

| ಎಂ.ಆರ್.ವಾಸುದೇವ | ರಿಯಲ್ ಅಡ್ಮಿರಲ್(ನಿವೃತ್ತ) ಬಿ.ಆರ್.ವಸಂತ್ | ಶ್ರೀಮತಿ ಕವಿತಾ ಶಾಸ್ತ್ರಿ |
|---|---|---|
| ಅಧ್ಯಕ್ಷರು | ಗೌರವಾಧ್ಯಕ್ಷರು | ಗೌರವ ಸಂಚಾಲಕರು |

**ಮತ್ತು ಪದಾಧಿಕಾರಿಗಳು, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ ಸಮಿತಿ–2016.**

### ತಾರೀಕು 17–12–2016ನೇ ಶನಿವಾರ : ಉದ್ಘಾಟನಾ ಕಾರ್ಯಕ್ರಮ

**ಪೂರ್ವಾಹ್ನ. 6.00ಕ್ಕೆ : ಚಂಡಿಕಾ ಹೋಮ–ವೇದಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ನೆರವೇರಲಿದೆ. ಹೋಮದ ಕರ್ತೃಗಳು ಪೂರ್ವಾಹ್ನ ಘಂಟೆ 9.00ರ ಒಳಗೆ ಉಪಸ್ಥಿತರಿರಬೇಕೆಂದು ವಿನಂತಿ.**

**ಪೂರ್ವಾಹ್ಮ 10.30ಕ್ಕೆ : ಪೂರ್ಣಾಹುತಿ**

**ಪೂರ್ವಾಹ್ನ 7.00ರಿಂದ : ನೋಂದಣಿ ಹಾಗೂ ಉಪಹಾರ**

### ಪೂರ್ವಾಹ್ನ 11.00 ರಿಂದ : ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ–2016

**ಸಭಾ ಕಾರ್ಯಕ್ರಮ – ಪೂರ್ವಾಹ್ನ 11.00ಕ್ಕೆ**

| | |
|---|---|
| ಉದ್ಘಾಟನೆ | : **ರಿಯಲ್ ಅಡ್ಮಿರಲ್ (ನಿವೃತ್ತ) ಬಿ.ಆರ್.ವಸಂತ್,** ಗೌರವಾಧ್ಯಕ್ಷರು |
| ಅಧ್ಯಕ್ಷತೆ | : **ಶ್ರೀ ಎಂ.ಆರ್.ವಾಸುದೇವ** |
| ದಿಕ್ಸೂಚಿ ಭಾಷಣ | : **ಡಾ।ಟಿ.ಕೆ.ಸುಬ್ರಹ್ಮಣ್ಯ,** ಮಾಜಿ ಉಪಕುಲಪತಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಮತ್ತು ಸಂಶೋಧನಾ ಪ್ರಾಚಾರ್ಯರು ರಾಷ್ಟ್ರೀಯ ಕಾನೂನು ವಿದ್ಯಾಲಯ, ಕೋಲ್ಕತ್ತಾ |
| ಉಪಸ್ಥಿತಿ | : **ಎಲ್ಲಾ ಸಂಘಗಳ ಅಧ್ಯಕ್ಷರು** |
| ಮಧ್ಯಾಹ್ನ 12ರಿಂದ | : **ಹಿರಿಯ ನಾಗರಿಕರ ಸಮ್ಮೇಳನ** ಉದ್ಘಾಟನೆ : **ಡಾ।ಸಂತೋಷ್ ಕುಮಾರ್ ಶಾಸ್ತ್ರಿ** |
| ಮಧ್ಯಾಹ್ನ 12ರಿಂದ | : **ಹಿರಿಯ ನಾಗರಿಕರಿಗೆ ದೊರಕುವ ಸೌಲಭ್ಯಗಳ ಮಾಹಿತಿ – ಶ್ರೀ.ಎಂ.ಆರ್.ವಾಸುದೇವ ಅವರಿಂದ** |
| ಮಧ್ಯಾಹ್ನ 12.15ರಿಂದ | : **ಪ್ರಶ್ನೋತ್ತರ ಕಾರ್ಯಕ್ರಮ** |
| ಮಧ್ಯಾಹ್ನ 1.00ಕ್ಕೆ | : **ಭೋಜನ** |
| ಅಪರಾಹ್ನ 2.30ರಿಂದ | : **ಹಿರಿಯ ನಾಗರಿಕರ ಸಮ್ಮೇಳನ ಸಮಾಜದ ಹಿರಿಯರಿಗೆ ಗೌರವ ಸಮರ್ಪಣೆ** ಅಧ್ಯಕ್ಷತೆ : **ಶ್ರೀ ಪಿ.ಸಂಜಯ ಕುಮಾರ್ ರಾವ್** |
| ಮಧ್ಯಾಹ್ನ 3.30ರಿಂದ | : **ಲಘು ಉಪಾಹಾರ** |
| ಸಂಜೆ 4.00ರಿಂದ | : **ವಿವಿಧ ಸಂಘ–ಸಂಸ್ಥೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ** |
| ರಾತ್ರಿ 7.30ರಿಂದ | : **ಭೋಜನ** |

### ತಾರೀಕು 18–12–2016ನೇ ಶನಿವಾರ

| | |
|---|---|
| ಪೂರ್ವಾಹ್ನ 7.00ಕ್ಕೆ | : **ಶ್ರೀ ಶಂಕರಾಚಾರ್ಯ–ಅಷ್ಟೋತ್ತರಶತನಾಮ ಲಲಿತಾಸಹಸ್ರನಾಮ ಮತ್ತು ರುದ್ರಪಠನ** |
| ಪೂರ್ವಾಹ್ನ 7.00ರಿಂದ 9.30 | : **ಲಘು ಉಪಾಹಾರ** |
| ಪೂರ್ವಾಹ್ನ 10.00 | : **ವಿಚಾರಗೋಷ್ಠಿ–1** |
| ಅಧ್ಯಕ್ಷತೆ | : **ಡಾ। ವೈ.ಸುದರ್ಶನ್ ರಾವ್** ವಿಷಯ : **ಸ್ಥಾನಿಕ ಸಮಾಜ ಕೈಗೊಳ್ಳಬೇಕಾದ ಸಮಾಜಮುಖೀ ಕಾರ್ಯಕ್ರಮಗಳು** |
| ಮುಖ್ಯ ಭಾಷಣಕಾರರು | : **ಶ್ರೀ ಎಂ.ಎಸ್.ರಾಧಾಕೃಷ್ಣ ರಾವ್, ಬೆಂಗಳೂರು.** |
| ಪೂರ್ವಾಹ್ನ 10.45ಕ್ಕೆ | : **ಪ್ರಶ್ನೋತ್ತರ ಕಾರ್ಯಕ್ರಮ** |
| ಪೂರ್ವಾಹ್ನ 11.00 | : **ವಿಚಾರಗೋಷ್ಠಿ–2** |
| ಅಧ್ಯಕ್ಷತೆ | : **ಶ್ರೀ.ಕೆ.ಪ್ರಭಾಕರ ರಾವ್,** ವಿಷಯ: **ಪೊಳಲಿ ನಿವೇಶನ ಅಭಿವೃದ್ಧಿ ಯೋಜನೆ** |
| ಮುಖ್ಯ ಭಾಷಣಕಾರರು | : **ಶ್ರೀ ಚಂದ್ರಕಾಂತ ರಾವ್ ಇನ್ನಾ** |
| ಪೂರ್ವಾಹ್ನ 11.45 | : **ಪ್ರಶ್ನೋತ್ತರ ಕಾರ್ಯಕ್ರಮ** |
| ಮಧ್ಯಾಹ್ನ 12.00ರಿಂದ | : **ವಿಚಾರಗೋಷ್ಠಿ–3** |
| ಅಧ್ಯಕ್ಷತೆ | : **ಶ್ರೀಮತಿ ಕವಿತಾ ಶಾಸ್ತ್ರಿ** ವಿಷಯ: **ಬದಲಾಗುತ್ತಿರುವ ಪ್ರಪಂಚದಲ್ಲಿ ಕೌಟುಂಬಿಕ ಸಮಸ್ಯೆಗಳು** |
| ಮುಖ್ಯ ಭಾಷಣಕಾರರು | : **ಶ್ರೀ ಮನೋಹರ ಪ್ರಸಾದ್,** ಚೀಫ್ ಆಫ್ ಬ್ಯೂರೋ, ಉದಯವಾಣಿ, ಮಂಗಳೂರು. |
| ಮಧ್ಯಾಹ್ನ 12.30 | : **ಪ್ರಶ್ನೋತ್ತರ ಕಾರ್ಯಕ್ರಮ.** |
| ಮಧ್ಯಾಹ್ನ 12.30ರಿಂದ | : **ಭೋಜನ** |
| ಮಧ್ಯಾಹ್ನ 12.45ರಿಂದ | : **ಗೋಷ್ಠಿ–4** |
| ಅಧ್ಯಕ್ಷತೆ | : **ಡಾ। ವೀಣಾ ಫಾಲಚಂದ್ರ ಸುಳ್ಯ** ವಿಷಯ: **ಪರ ಊರಿನಲ್ಲಿನ ಸ್ಥಾನಿಕ ಸಾಧಕರು** |
| ಮುಖ್ಯ ಭಾಷಣಕಾರರು | : **ಶ್ರೀ ಬಿ. ಬಾಲಚಂದ್ರ ರಾವ್, ಮುಂಬೈ** |
| ಮಧ್ಯಾಹ್ನ 1.00ಕ್ಕೆ | : **ಪ್ರಶ್ನೋತ್ತರ ಕಾರ್ಯಕ್ರಮ** |
| ಮಧ್ಯಾಹ್ನ 2.00ರಿಂದ | : **ಗೋಷ್ಠಿ–5** |
| ಅಧ್ಯಕ್ಷತೆ | : **ಶ್ರೀ ಎಂ.ಆರ್.ವಾಸುದೇವ** ವಿಷಯ : **ವಿವಿಧ ಸ್ಥಾನಿಕ ಸಂಘಟನೆಗಳು ಎದುರಿಸುತ್ತಿರುವ ದೈನಂದಿನ ಸಮಸ್ಯೆಗಳು** |

***ಅನಿಸಿಕೆಗಳು : ಎಲ್ಲಾ ಸಂಘಟನೆಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಂದ***

### ಅಪರಾಹ್ನ ಗಂಟೆ 3.00ರಿಂದ ಸಮಾರೋಪ ಸಮಾರಂಭ

| | |
|---|---|
| ಅಧ್ಯಕ್ಷರು | : **ರಿಯಲ್ ಅಡ್ಮಿರಲ್ (ನಿವೃತ್ತ) ಬಿ.ಆರ್.ವಸಂತ್** |
| ಪ್ರಧಾನ ಅಭ್ಯಾಗತರು | : **ಶ್ರೀ ಬೊಕ್ಕಸ ಚಂದ್ರಶೇಖರ್ ರಾವ್** ಜನರಲ್ ಮ್ಯಾನೇಜರ್, ಕರ್ಣಾಟಕ ಬ್ಯಾಂಕ್ |
| | **ಶ್ರೀ ಪಂಜ ಪ್ರದೀಪ್ ರಾವ್** ವ್ಯವಸ್ಥಾಪಕರ ನಿರ್ದೇಶಕರು (ನಿವೃತ್ತ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| | **ಶ್ರೀ ಎನ್.ಕೆ.ಜಗನ್ನಿವಾಸ ರಾವ್,** ಸದಸ್ಯರು, ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್ |

**ಸನ್ಮಾನ ಕಾರ್ಯಕ್ರಮ**


| | |
|---|---|
| ಸಂಜೆ 4.30 ರಿಂದ | : **ಸಾಂಸ್ಕೃತಿಕ ಕಾರ್ಯಕ್ರಮಗಳು** |
| ರಾತ್ರಿ 7.30 ರಿಂದ | : **ಭೋಜನ** |

**ಸ್ಥಾನಿಕ ಸಮಾವೇಶದ ಅವಧಿಯಲ್ಲಿ ವಧುವರರ ಮಾಹಿತಿಗಾಗಿ ಸಂಪರ್ಕಿಸಿರಿ**
ಶ್ರೀ ಚೇತನ್ ಶರ್ಮ; ಶ್ರೀಮತಿ ವೈಜಯಂತಿ ಮಾಲಾ ಬೆಳ್ಳೆ
ಶ್ರೀ ಶಶಿಕಾಂತ್ ರಾವ್ ಎನ್.; ಶ್ರೀಮತಿ ಸ್ಮಿತಾ ರಾವ್; ಶ್ರೀ ಸತೀಶ್ ಕೆಮ್ಮಣ್ಣು

### ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ ಸಮಿತಿ–2016

ಗೌರವಾಧ್ಯಕ್ಷರು : **ರಿಯರ್ ಅಡ್ಮಿರಲ್ (ನಿವೃತ್ತ) ಬಿ.ಆರ್.ವಸಂತ್,** ಅಧ್ಯಕ್ಷರು : **ಶ್ರೀ ಎಂ. ಆರ್. ವಾಸುದೇವ**
ಗೌರವ ಸಂಚಾಲಕರು : **ಶ್ರೀಮತಿ ಕವಿತಾ ಶಾಸ್ತ್ರಿ,** ವ್ಯವಸ್ಥಾಪಕ ಸಂಚಾಲಕರು : **ಶ್ರೀ ಎನ್.ಕೆ.ಜಗನ್ನಿವಾಸ ರಾವ್**
ಸಂಚಾಲಕರು : **ಡಾ। ವೈ. ಸುದರ್ಶನ ರಾವ್,** ಸಹ ಸಂಚಾಲಕರು: **ಶ್ರೀ ಬಿ.ಎಸ್.ಅನಿಲ್ ರಾವ್**
ವಿಚಾರಗೋಷ್ಠಿಯ ಸಂಚಾಲಕರು : **ಶ್ರೀ ಬಿ.ಕೆ. ಧನಂಜಯ ರಾವ್**
ಗೌರವ ಸಲಹೆಗಾರರು : ಶ್ರೀ ಕೆ.ಗೋಪಾಲ ರಾವ್ ; ಶ್ರೀ ಐ. ಜಗದೀಶ ರಾವ್ ; ಶ್ರೀ ಎ. ಮೋಹನ ರಾವ್, ಶ್ರೀ ಉಮೇಶ ಶಾನುಭೋಗ್ ; ಶ್ರೀಮತಿ ಮೋಹಿನಿ ಡಿ.ರಾವ್ ; ಡಾ। ಸತ್ಯನಾಥನ್ ; ಶ್ರೀ ನಂದಳಿಕೆ ಬಾಲಚಂದ್ರ ರಾವ್; ಶ್ರೀ ಜಿ.ಕೆ.ಕೊಲ್ವೆ; ಶ್ರೀ ಸಿ.ಎಸ್.ರಾವ್ ; ಶ್ರೀ ಎಸ್. ಎಂ ರಾವ್; ಶ್ರೀ ಪಿ.ಲಕ್ಷ್ಮೀನಾರಾಯಣ ರಾವ್;


With Best Compliments From :
Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.







# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

ಕುಂಜಿಬೆಟ್ಟು, ಉಡುಪಿ–576102

ವಿಳಾಸ ಪುಸ್ತಕದಲ್ಲಿ ನಿಮ್ಮ ಹೆಸರು ದಾಖಲಿಸಲು ಕೊನೆಯ ಅವಕಾಶ

## ಪ್ರಕಟಣೆ

**ಆತ್ಮೀಯ ಉಡುಪಿ ತಾಲೂಕಿನ ಸಮಾಜ ಬಾಂಧವರೇ.**

**ಉಡುಪಿ ತಾಲೂಕಿನ ನಮ್ಮ ಸಮಾಜಬಾಂಧವರ ವಿಳಾಸವನ್ನು ಪರಿಷ್ಕರಿಸಿ ಅನೇಕ ವರ್ಷಗಳಾಗಿವೆ. ಸಮಾಜಬಾಂಧವರ ಸಮಗ್ರ ಮಾಹಿತಿಯುಳ್ಳ ನೂತನ ಆವೃತ್ತಿಯನ್ನು ಹೊರತರುವ ಅಗತ್ಯವನ್ನು ಸಂಘವು ಮನಗಂಡ ಹಿನ್ನೆಲೆಯಲ್ಲಿ ನಮ್ಮ ಸಂಘದ ಸುವರ್ಣಮಹೋತ್ಸವದ ಆಚರಣೆಯ ಅಂಗವಾಗಿ ಉಡುಪಿ ತಾಲೂಕಿನ ಸಮಾಜಬಾಂಧವರ ಸಮಗ್ರ ಮಾಹಿತಿಯುಳ್ಳ ವಿಳಾಸ ಸಹಿತ ಪುಸ್ತಕವನ್ನು ಪ್ರಕಟಿಸುವ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ. ಈ ಕೆಳಗಿನ ಫಾರಂನ್ನು ಭರ್ತಿಮಾಡಿ ಅಧ್ಯಕ್ಷರು, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಉಡುಪಿ 576102 ಈ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ**

Name of the head of family *:______________________________

Occupation and office address: ______________________________

______________________________

Qualification:________________ Mobile no.*:________________

Email:________________ Blood group________________

Name of the spouse *______________________________

Occupation and office address: ______________________________

______________________________

Qualification:________________ Mobile no.*:________________

Email:________________ Blood group________________

Residential address *:______________________________

______________________________

______________________________ Pin No:________________

Land phone no:______________________________

Are you a member Of our Sangha *: Yes/No

Are you getting Sri Sharada Paper * : Yes/No

DETAILS OF CHILDREN

| Sl. no. | Name | Date of birth/ age | married (yes/no) | Blood group |
|---|---|---|---|---|
| 1. | | | | |
| 2. | | | | |
| 3. | | | | |

NAME & ADDRESS OF THE CHILDREN STAYING SEPARATE*

1) ______________________________

______________________________

Mobile________________ Email________________

2) ______________________________

______________________________

Mobile________________ Email________________

3) ______________________________

______________________________

Mobile________________ Email________________

*Marked with * are very much required for our address book.*
*Please try to furnish these details without fail*

I give my consent to Sri Stanika Dravida brahmana Sangha (R.), Udupi to publish this information in address book

*Signature*

## ಕವನಗಳು

### ಎಲ್ಲಿದೆ ನಿಜ ದೀಪಾವಳಿ?

ಅಂದಿನಾ ದೀಪಗಳು, ಇಂದು ಮಸುಕಾಗುತಿವೆ
ಬೆಳಗಿದಾ ಜ್ಯೋತಿಗಳು ಬೆಳಕನ್ನು ಕಳೆಯುತಿವೆ
ಉರಿಯುತಿಹ ಬತ್ತಿಗಳು, ಕರಿಬಣ್ಣತಾಳುತಿವೆ
ದೀಪದಾ ತೈಲ ತಾ ಆರಿ ಹೋಗುತಿದೆ ॥1॥

ಹಿರಿಯ ಕುಟುಂಬಗಳು, ಕಿರಿದು ಕಿರಿದಾಗುತಿವೆ
ಅನ್ಯೋನ್ಯ ಬಾಂಧವ್ಯ, ದೂರವಾಗುತಲಿವೆ
ತೈಲ ಸ್ನಾನಗಳಿಲ್ಲ, ಹೊಸ ಉಡುಪು ಬೇಕಿಲ್ಲ
ಮನೆಯಲ್ಲಿ ಪ್ರೀತಿಯಾ ಒಡನಾಟವಿಲ್ಲ ॥2॥

ಅಂದಿನಾ ಮಳೆ ಇಲ್ಲ, ಅಂದಿನಾ ಬೆಳೆ ಇಲ್ಲ,
ರೈತರಾ ಭವಣೆ, ಕೇಳುವವರಿಲ್ಲ,
ಸಿಹಿತಿಂಡಿಗನುವಿಲ್ಲ, ಕಹಿಬೇವೆಗತಿ ಎಲ್ಲ.
ಮಕ್ಕಳಾ ಪಾಲಿಗೆ ಹೊಸ ಬೆಳಕು ಇಲ್ಲ ॥3॥

ಭಾರತಾಂಬೆಯ ಗಡಿಯ ಉದ್ದಕ್ಕೂ
ಸಿಡಿಯುತಿವೆ ಬಾಂಬುಗಳು, ಸಿಡಿಮದ್ದುಗಳು
ಜೈ ಜವಾನರಿಗೆ, ಇದುವೆ ದೀಪಾವಳಿಯೇ?
ಮನೆ ಮಂದಿಗಳನೆಲ್ಲಾ, ನೆನೆಯುತಿಹ ಸೈನಿಕರು ॥4॥

ಎಲ್ಲೆಲ್ಲೂ ಬರಗಾಲ ಜೈಕಿಸಾನರಿಗೆ ಸಾಲವೇ ಸಾಲ
ಅವರ ಪಾಲಿಗೆ ಸದಾ ನರಕ ಚತುರ್ದಶಿಯು?
ಎಲ್ಲಿದೆ ನಿಜ ದೀಪಾವಳಿ, ಎಲ್ಲಿದೆ ಹುಣ್ಣಿಮೆಯಲ್ಲಿ?
ಎಲ್ಲೆಲ್ಲೂ ಸಿಡಿಯುತಿವೆ, ನೋವಿನಾ ಪಟಾಕಿಗಳು॥

**–ಕೆ. ಗೋಪಾಲರಾವ್, ಕಡಬ.**

### ಕಂಬನಿ

ಕೇಂದ್ರಿಕೃತ ಬಲಗಳ ನಡುವೆ
ಸ್ವತಂತ್ರ ಮನಸಿನ ಹಂಬಲ
ಜಗಮಗಿಸುವ ವೈಭವದ ಕಡೆಗೆ
ಅಲೆಮಾರಿಯ ಕನಸಿನ ಕಂಬನಿ
ಆದಿಯ ನಿಯಮಕ್ಕೆ ತುತ್ತಾಗಿ
ಪಾತ್ರಧಾರಿಯ ಅನುಕರಣೆಯಲಿ
ಬಿದ್ದು, ರಕ್ತದ ಮಡಿಲಿ ಒದ್ದಾಡಿ,
ಕರುಳಿನ ನೋವಿನ ಕೂಗಿನಲ್ಲಿ.
ಧನಿಗೆ ಒಕ್ಕೊರಲಾಗದ ಶಕ್ತಿ
ಗುರುತ್ವ ದಿಕ್ಕಿನಲ್ಲಿನ ಭಕ್ತಿ,
ಪ್ರತಿಫಲನದ ಸೇತುವೆಯ
ಬಿಂದುವಿನ ಸರಳ ರೇಖೆಯಲ್ಲಿ.
ಕ್ರೂರತೆಗೆ ಒಳಗಾದ ಜಲರಾಶಿ,
ಪರಿಭ್ರಮಣೆಯಲ್ಲಿ ಕೂಡಲು ಭೃಮರಿ,
ಕಹಿ–ಸವಿಯಲಾಯಿತು ಸಾಕ್ಷಿ,
ಸಾಯ್ಯತೆಗೆ ಸಾಟಿಯಾಗದ ಧಮನಿ.
ಅಣಿವಿನ ವಿಸ್ತಾರತೆಯ ಬಯಕೆಯ
ಶೇಷವಿಲ್ಲದ ಶೂನ್ಯದ ಸನಿಹಕೆ
ಹೊರಡಲು, ಉತ್ತರ ಸಿಗದ
ಪ್ರಶ್ನೆಯ ಆಗರವಾದ ಸಾಗರ
ಅಭಿವ್ಯಕ್ತಿಯ ಇಚ್ಛಾಶಕ್ತಿಯ ನಯನಗಳು
ಅರಿವಿಲ್ಲದೆ ನೋಡುತ್ತಿರುವ ಸೂರ್ಯ,
ನಕ್ಷತ್ರ, ಗೃಹ, ನಭೋಮಂಡಲದಲ್ಲಿ
ನಾನು ಎಂಬುದು ಕಳೆಯಬೇಕು.

**–ಕ.ಸು.ಶ್ರೀ.**

### ವೃಶ್ಚಿಕ ಮಾಸದ ವಿಶೇಷ ದಿನಗಳು

| | |
|---|---|
| 15-11-2016 | ವೃಶ್ಚಿಕ ಸಂಕ್ರಮಣ |
| 17-11-2016 | ಸಂಕಷ್ಟಹರ ಚತುರ್ಥಿ |
| 25-11-2016 | ಸರ್ವೈಕಾದಶಿ |
| 28-11-2016 | ಕೊನೆಯ ಕಾರ್ತಿಕ ಸೋಮವಾರ |
| 29-11-2016 | ಅಮಾವಾಸ್ಯೆ |
| 30-11-2016 | ಮಾರ್ಗಶಿರ ಮಾಸಾರಂಭ |
| 05-12-2016 | ಸುಬ್ರಹ್ಮಣ್ಯ ಷಷ್ಠಿ |
| 10-12-2016 | ಸರ್ವೈಕಾದಶಿ |
| 13-12-2016 | ಹುಣ್ಣಿಮೆ |
| 15-12-2016 | ಧನು ಸಂಕ್ರಮಣ |
| 16-12-2016 | ಸಂಕಷ್ಟಹರ ಚತುರ್ಥಿ |

# ಕಾರ್ಕಳ ಶಂಕರ ಪ್ರತಿಷ್ಠಾನದ ವಾರ್ಷಿಕ ಪ್ರವಾಸ

ದಿನಾಂಕ 23-10-2016ರಂದು ಕಾರ್ಕಳದ ನಮ್ಮ ಸಮಾಜ ಬಾಂಧವರಿಗಾಗಿ ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ ಇದರ ನೇತೃತ್ವದಲ್ಲಿ ಇಡಗುಂಜಿ ಶ್ರೀ ಮಹಾಗಣಪತಿ ದೇವಸ್ಥಾನ ಮತ್ತು ಶ್ರೀ ಮುರುಡೇಶ್ವರ ದೇವಸ್ಥಾನಗಳಿಗೆ ಒಂದು ದಿನದ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಬಹುತೇಕ ಸದಸ್ಯರು ಮುಂಚೆ ನೋಡಿದ್ದ ಸ್ಥಳಗಳಾದರೂ ಸಮಾಜ ಬಾಂಧವರು ಒಟ್ಟಾಗಿ ಹೋಗುವ ಸಂತೋಷವನ್ನು ಸವಿಯಲೆಂದು ಹಿರಿಯರು ಮಕ್ಕಳು ಸೇರಿದಂತೆ 34 ಸದಸ್ಯರು ಪೂರ್ವ ನಿಗದಿಯಂತೆ ಬೆಳಿಗ್ಗೆ 6.30 ಗಂಟೆಗೆ ಕಾರ್ಕಳದಿಂದ ಹೊರಟೆವು. ಶ್ರೀಮತಿ ಮಲ್ಲಿಕಾ ಎಸ್.ಹೆಬ್ಬಾರ್ ಮತ್ತು ಶ್ರೀಮತಿ ಸುಮನಾ ಜಗದೀಶ ರಾವ್‌ರವರ ಗಣಪತಿಯ ಸ್ತುತಿಯೊಂದಿಗೆ ನಮ್ಮ ಕಾರ್ಯಕ್ರಮ ಪ್ರಾರಂಭವಾಯಿತು. ಅಲ್ಲಿಂದ ನಮ್ಮ ಬಸ್ಸು ತಲುಪಿದ್ದು ಆನೆಗುಡ್ಡೆ ಶ್ರೀ ವಿನಾಯಕ ದೇವರ ಸನ್ನಿಧಿಗೆ. ಅಲ್ಲಿ ವಿಘ್ನ ನಿವಾರಕನ ದರ್ಶನ ಮಾಡಿ, ನಮ್ಮ ಪ್ರಯಾಣದ ಯಶಸ್ಸಿಗಾಗಿ ಪ್ರಾರ್ಥಿಸಿ, ಸಮೀಪದಲ್ಲೇ ಇರುವ ನಮ್ಮ ಸಮಾಜ ಬಾಂಧವರಾದ ಶ್ರೀ ಕುಂಭಾಶಿ ಗಣೇಶ ರಾಯರ ಮನೆಗೆ ಆಗಮಿಸಿದೆವು.

ಶ್ರೀಮತಿ ಶಾಂತಾ ಗಣೇಶ ರಾವ್ ಮತ್ತು ಶ್ರೀ ಗಣೇಶ ರಾವ್‌ರವರು ನಮಗೋಸ್ಕರ ಬೆಳಗ್ಗಿನ ಉಪಾಹಾರವನ್ನು ತಯಾರಿಸಿ ಕಾಯುತ್ತಿದ್ದರು. ಅವರು ತಯಾರಿಸಿದ ಮೂಡೆ, ಕೇಸರಿಬಾತ್ ಮತ್ತು ಬನ್ಸ್ ಇತ್ಯಾದಿಗಳನ್ನು ಸವಿದೆವು. ಗಣೇಶ ರಾವ್ ದಂಪತಿಗಳ ಆದರಾತಿಥ್ಯಕ್ಕೆ ನಮ್ಮ ಹೃದಯ ತುಂಬಿ ಬಂತು. ಅವರಿಗೆ ಮತ್ತು ಸಹಕರಿಸಿದ ಶ್ರೀ ಕೃಷ್ಣಮೂರ್ತಿ ಹೆಬ್ಬಾರ್‌ರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಿ ಸುಮಾರು 8.30ಕ್ಕೆ ಅಲ್ಲಿಂದ ಮುಂದಡಿಯಿಟ್ಟೆವು. ಹಾಡು, ನೃತ್ಯ ಮತ್ತು ಪುಟ್ಟಮಕ್ಕಳ ತುಂಟಾಟಗಳೊಂದಿಗೆ ಸಂಭ್ರಮದಿಂದ ಸುಮಾರು 11.00 ಗಂಟೆಗೆ 1500 ವರ್ಷಗಳ ಇತಿಹಾಸವಿರುವ ಇಡಗುಂಜಿ ಶ್ರೀ ಮಹಾಗಣಪತಿ ದೇವಸ್ಥಾನವನ್ನು ತಲುಪಿದೆವು.

ದ್ವಾಪರ ಯುಗದ ಅಂತ್ಯದಲ್ಲಿ ಶ್ರೀ ಕೃಷ್ಣನು ತನ್ನ ಅವತಾರವನ್ನು ಸಮಾಪ್ತಿಗೊಳಿಸಿ ನಿರ್ಗಮಿಸುವಂತಹ ಸಂದರ್ಭದಲ್ಲಿ ಈ ಭೂಮಂಡಲವು ಅನಾಥವಾಗುವುದೆಂದು ತಿಳಿದು ಹಾಗೂ ಮುಂಬರುವ ಕಲಿಯುಗದ ದೋಷಗಳಿಂದ ಭೂಮಂಡಲವನ್ನು ಕಾಪಾಡುವ ಸಲುವಾಗಿ ವಾಲಖಿಲ್ಯ ಎಂಬ ಋಷಿಗಳ ನೇತೃತ್ವದಲ್ಲಿ ಕುಂಜಾರಣ್ಯವೆಂಬ ಈ ಪ್ರದೇಶದಲ್ಲಿ ಋಷಿ, ಮುನಿಗಳು ಯಾಗ ಕಾರ್ಯಗಳನ್ನು ಪ್ರಾರಂಭಿಸಿದರಂತೆ. ಅಸುರರ ಉಪಟಳದಿಂದಾಗಿ ಅವರು ಸತ್ಕರ್ಮಗಳನ್ನು ಮುಂದುವರಿಸಲಾಗದೆ ಅಸಹಾಯಕರಾದ ಸಂದರ್ಭದಲ್ಲಿ ನಾರದರ ಸೂಚನೆಯಂತೆ ವಿಘ್ನ ನಿವಾರಕನಾದ ಮಹಾಗಣಪತಿಯನ್ನು ಮೊರೆ ಹೋದಾಗ ಗಣಪತಿಯು ಅಲ್ಲಿ ಬಂದು ಯಾಗಕ್ಕೆ ರಕ್ಷಣೆಯನ್ನು ಒದಗಿಸಿದನಂತೆ ಅಲ್ಲಿಯ ಪ್ರಕೃತಿ ಸೌಂದರ್ಯಕ್ಕೆ ಮೊರೆಹೋಗಿ. ಜಗತ್ತಿನ ರಕ್ಷಣೆಗಾಗಿ ಗಣಪತಿಯು ಅಲ್ಲಿಯೇ ನೆಲೆನಿಂತನಂತೆ. ಎಲ್ಲಾ ದೇವತೆಗಳು ತಮ್ಮ ತಮ್ಮ ಅಂಶಗಳನ್ನು ಅವನಿಗೆ ದಯಪಾಲಿಸಿ ದೇವಲೋಕಕ್ಕೆ ಮರಳಿದರೆಂದು ಪ್ರತೀತಿ. ಇಂತಹ ಸಕಲ ಇಷ್ಟ ಪ್ರದಾಯಕನಾದ ಗಣಪತಿಯ ದರ್ಶನ ಮಾಡಿ ಪುನೀತ ರಾದೆವು. ಬೆಳಿಗ್ಗೆ ಬೇಗನೆ ತಲುಪಿದ್ದುದರಿಂದ ನಿರಾಭರಣನಾಗಿ, ಒಂದು ಕೈಯಲ್ಲಿ ಮೋದಕ ಮತ್ತೊಂದು ಕೈಯಲ್ಲಿ ಪದ್ಮ ಪಾಣಿಯಾದ ಗಣೇಶನ ಬಿಂಬ ಮತ್ತು ಸಕಲಾಭರಣಗಳಿಂದ ಮತ್ತು ಪುಷ್ಪಗಳಿಂದ ಭೂಷಿತನಾದ ಗಣೇಶನನ್ನು ಕೂಡಾ ನೋಡುವ ಭಾಗ್ಯ ನಮ್ಮದಾಯಿತು.

ಮಹಾಪೂಜೆಯ ನಂತರ ಅಲ್ಲೇ ಭೋಜನ ಪ್ರಸಾದವನ್ನು ಸ್ವೀಕರಿಸಿ, ಮುರುಡೇಶ್ವರದತ್ತ ಪ್ರಯಾಣವನ್ನು ಬೆಳೆಸಿದೆವು. ದಾರಿಯಲ್ಲಿ ಅಪ್ಸರಕೊಂಡ ಜಲಪಾತವನ್ನು ವೀಕ್ಷಿಸಿ, ಅಲ್ಲೇ ಬಳಿಯಲ್ಲಿರುವ ರಾಮಚಂದ್ರಾಪುರ ಮಠದ ಶಾಖೆ ಮತ್ತು ಉಗ್ರ ನರಸಿಂಹ ದೇವಸ್ಥಾನವನ್ನು ಸಂದರ್ಶಿಸಿದೆವು.

ಅಪ್ಸರಕೊಂಡ ಜಲಪಾತದ ಸೊಬಗನ್ನು ವೀಕ್ಷಿಸಿದ ನಮ್ಮ ಪ್ರತಿಷ್ಠಾನದ ನಿರ್ದೇಶಕರಾದ ಶ್ರೀ ಬಜಗೋಳಿ ಉಮೇಶ ರಾಯರು ಸ್ಥಳದಲ್ಲೇ ಒಂದು ಚುಟುಕು ಕವನವನ್ನು ರಚಿಸಿದರು.

ಕಂಡೆನು ನಾನು ಅಪ್ಸರ ಕೊಂಡ॥
ಜಲಧಾರೆಯಲ್ಲಿ ಮಿಯುತಿತ್ತು ಗಂದರ್ವ
ಅಪ್ಸರೆಯರ ತಂಡ॥
ಜಲಕ್ರೀಡೆಯಾಡಿ ಮಾಡಿದರು
ಕೊಂಡವನ್ನು ಕೆನ್ನೀರ ಹೊಂಡ॥
ಕೊಂಡಕ್ಕಿಳಿದು ಫೋಟೋ ತೆಗೆಸಿಕೊಳ್ಳದೆ
ನಾನಾದೆ ದಂಡ॥

ಅಲ್ಲಿಂದ ಹೊರಟು ಸಾಯಂಕಾಲ ಸುಮಾರು 4 ಗಂಟೆಗೆ ಮುರುಡೇಶ್ವರವನ್ನು ತಲುಪಿ ದೇವರ ದರ್ಶನವನ್ನು ಮಾಡಿದೆವು. ರಾವಣನು ಶಿವನ ಆತ್ಮಲಿಂಗವನ್ನು ಹಿಡಿದುಕೊಂಡು ಲಂಕೆಗೆ ಹಿಂದಿರುಗುತ್ತಿರಲು ಅಪಾಯವನ್ನರಿತ ಗಣಪತಿಯ ಉಪಾಯ ದಿಂದ ಆತ್ಮಲಿಂಗವು ಮತ್ತೆ ಭೂಮಿಯಲ್ಲಿ ನೆಲೆಯಾದಾಗ ರಾವಣನ ಸಿಟ್ಟಿಗೆ ಪುಡಿ ಪುಡಿಯಾದ ಆತ್ಮಲಿಂಗದ ಒಂದು ಭಾಗ ಬಿದ್ದ ಸ್ಥಳವೇ ಮುರುಡೇಶ್ವರ ಎಂದು ಪ್ರತೀತಿಯಿದೆ. ದೇವರ ದರ್ಶನ ಮಾಡಿದ ನಂತರ ಭೂ ಕೈಲಾಸ ಗುಹೆಯನ್ನು ಮತ್ತು ಎತ್ತರದಲ್ಲಿ ಜಗತ್ತಿನಲ್ಲೇ ಎರಡನೆಯದಾದ ಶಿವನ ಮೂರ್ತಿಯನ್ನು ದರ್ಶಿಸಿ ಅಲ್ಲಿರುವ 18 ಅಂತಸ್ತುಗಳುಳ್ಳ ರಾಜಗೋಪುರದ ತುತ್ತ ತುದಿಯ ಅಂತಸ್ತಿಗೆ ಲಿಫ್ಟ್‌ನಲ್ಲಿ ತೆರಳಿ ಸುತ್ತ ಮುತ್ತಲ ಪರಿಸರವನ್ನು ವೀಕ್ಷಿಸಿದೆವು. ನಂತರ ಸಮುದ್ರದಲ್ಲಿ ನೀರಾಟವಾಡಿ, ಸ್ವಲ್ಪ ಹೊತ್ತು ವಿಹರಿಸಿ, ಸುಮಾರು 6 ಗಂಟೆಗೆ ಅಲ್ಲಿಂದ ಹೊರಟೆವು. ಬಸ್ಸಿನಲ್ಲಿ ಮೋಜು ಮಸ್ತಿಯ ಜೊತೆಗೆ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಮುರಲೀಧರ ಶರ್ಮರು ಮತ್ತು ಕಾರ್ಯದರ್ಶಿ ಶ್ರೀ ರತ್ನಾಕರ ರಾಯರು ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ರಾತ್ರಿ ಗಂಟೆ 9ಕ್ಕೆ ಕಾರ್ಕಳಕ್ಕೆ ತಲುಪಿ ಪ್ರವಾಸದ ಸಂತೋಷದ ಕ್ಷಣಗಳನ್ನು ಮೆಲುಕು ಹಾಕುತ್ತಾ ಒಲ್ಲದ ಮನಸ್ಸಿನಿಂದಲೇ ಬೀಳ್ಕೊಂಡೆವು.

# ಭರತನಾಟ್ಯ ರಂಗಪ್ರವೇಶ-ಗುರುವಂದನೆ



ಉಡುಪಿ ಪರ್ಕಳದ ಶ್ರೀಮತಿ ಆಶಾಲತಾ ಮತ್ತು ಶ್ರೀ ಪೆರ್ಣಂಕಿಲ ಶ್ರೀನಿವಾಸ ರಾಯರ ಪುತ್ರಿ ವಿದುಷಿ ಡಾ। ಚೈತ್ರ ರಾವ್ ಪೆರಣಂಕಿಲ ಇವರ ಭರತನಾಟ್ಯ ರಂಗಪ್ರವೇಶ ಹಾಗೂ ಗುರುವಂದನೆಯು ಪರ್ಯಾಯ ಶ್ರೀ ಪೇಜಾವರ ಅಧೋಕ್ಷಜ ಮಠ, ಶ್ರೀಕೃಷ್ಣ ಮಠ, ಉಡುಪಿ ಇದರ ಆಶ್ರಯದಲ್ಲಿ ಉಭಯ ಶ್ರೀಪಾದರುಗಳ ಪೂರ್ಣಾನುಗ್ರಹದೊಂದಿಗೆ ಗುರುದೇವ ಲಲಿತ ಕಲಾ ಅಕಾಡಮಿ ಮಂಡ್ಯ-ಮೈಸೂರು ಇವರ ಪ್ರಸ್ತುತಿಯೊಂದಿಗೆ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ತಾ.28-11-2016ನೇ ಸೋಮವಾರ ಸಂಜೆ 7 ಗಂಟೆಗೆ ಜರುಗಲಿದೆ. ಸಮಾಜ ಬಾಂಧವರನ್ನು ಶ್ರೀಮತಿ ಆಶಾಲತಾ ಹಾಗೂ ಶ್ರೀನಿವಾಸ ದಂಪತಿಗಳು ಆದರದಿಂದ ಈ ಕಾರ್ಯಕ್ರಮಕ್ಕೆ ಸ್ವಾಗತಿಸುತ್ತಿದ್ದಾರೆ.

॥ ಶ್ರೀ ಕ್ಷೇತ್ರ ಉದಯಾದ್ರಿ ॥

# ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ ಮತ್ತು ಸ್ವಾಧ್ಯಾಯ ಅನುಷ್ಠಾನ ಮಂಡಲ

**ಪಡುಬಿದ್ರಿ, ಉಡುಪಿ ಜಿಲ್ಲೆ-574111.**

ಸಮಾಜ ಬಾಂಧವರೇ,

ನಮ್ಮ ಸಮಾಜದಲ್ಲಿ ವೇದಶಿಕ್ಷಣವನ್ನು ಉಳಿಸಿ, ಬೆಳೆಸುವ ಕಳಕಳಿಯಿಂದ ವೈದಿಕ ಪರಂಪರೆಯನ್ನು ವೃತ್ತಿ/ಉಪವೃತ್ತಿಯನ್ನಾಗಿಸುವ ಅಥವಾ ಸ್ವಾಧ್ಯಾಯ ಶೀಲರಾಗಿಸುವ ನಿಟ್ಟಿನಲ್ಲಿ ಈ ಕೆಳಗಿನಂತೆ ನಿರಂತರ ವೇದಶಿಕ್ಷಣ ತರಗತಿಯನ್ನು ಆಯೋಜಿಸಲಾಗಿದೆ. ಯುವಕರಿಗೆ ಆದ್ಯತೆ ಮತ್ತು ಹಿರಿಯರಿಗೂ ಸಮಾನ/ಸಾಮೂಹಿಕವಾಗಿ ಓದುವ ಅವಕಾಶ ನೀಡಲಾಗುವುದು. ನಮ್ಮ ಸಮಾಜ ಬಾಂಧವರು ಉಚಿತವಾಗಿ ನಡೆಯುವ ಈ ಕಾರ್ಯಕ್ರಮವನ್ನು ಸದುಪಯೋಗ ಪಡಿಸಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಸ್ಥಳ : **ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ**
ಸಮಯ : **ಪ್ರತಿ ತಿಂಗಳ 2ನೇ ಮತ್ತು 4ನೇ ಶನಿವಾರ ಹಾಗೂ ಪ್ರತೀ ಭಾನುವಾರ ಸಂಜೆ 4-30ರಿಂದ 6-00 ಗಂಟೆಯವರೆಗೆ**
**ವಯೋಮಿತಿಯ ನಿರ್ಬಂಧವಿಲ್ಲ, ಉಚಿತ ಅವಕಾಶ**
ಸಂಪರ್ಕ : **9449029668, 9686942489, 9449639790, 9900192510**

**- ಅಧ್ಯಕ್ಷರು ಮತ್ತು ಸರ್ವಸದಸ್ಯರು**

ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ ಹಾಗೂ ಸ್ವಾಧ್ಯಾಯ ಮಂಡಲ, ಪಡುಬಿದ್ರಿ.

## ಶ್ರೀಶಾರದಾ ವೇದಿಕೆ - ಪ್ರಕಟಣೆ

**ಪತ್ರಿಕೆಯ ವಿಳಾಸ : ಸಂಪಾದಕರು, ಶ್ರೀ ಶಾರದ ಪತ್ರಿಕೆ, ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102. ಇ-ಮೇಯ್ಲ್ : srisharadaudupi@gmail.com**
**ವೈಬ್‌ಸೆಟ್ : www.srisharada.org ವಾಟ್ಸ್ ಆ್ಯಪ್ ನಂಬ್ರ : 9845136322**
**ಶಾರದ ಮಂಟಪದ ಮ್ಯಾನೇಜರ್ : 0820-2520754, 9448108920**

## ಶ್ರೀಶಾರದಾ ವೇದಿಕೆಗೆ ಸದಸ್ಯತನ ಶುಲ್ಕ

ಆಜೀವ ಸದಸ್ಯರು : ರೂ.500/-, ದಾನಿಗಳು : ರೂ.1000/-,
ಪೋಷಕರು : ರೂ.5000/-, ಮಹಾಪೋಷಕರು : ರೂ.10000/-

**ಜಾಹೀರಾತುದರ**

| | | |
|---|---|---|
| ಕಲರ್ ಪುಟದ 1/3ನೇ ಭಾಗ 12 ತಿಂಗಳುಗಳಿಗೆ | : | ರೂ.12000/- |
| ಕಲರ್ ಪುಟದ 1/8ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದುಬಾರಿಗೆ | : | ರೂ.1000/- |
| ಕಪ್ಪು ಬಿಳುಪು ಪುಟದ 1/8ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದು ಬಾರಿಗೆ | : | ರೂ.500/- |
| ಕಪ್ಪು ಬಿಳುಪು ಪುಟದ 2 ಇಂಚು 2 ಕಾಲಂ 12 ತಿಂಗಳುಗಳಿಗೆ | : | ರೂ.1500/- |

ಈ ಶುಲ್ಕವನ್ನು ತಮ್ಮ ಹೆಸರು ವಿಳಾಸದೊಂದಿಗೆ, ನಗದು, ಚೆಕ್ ಅಥವಾ ಡಿ.ಡಿ. ಮುಖಾಂತರ ಸಲ್ಲಿಸಬಹುದು ಅಥವಾ ಕರ್ನಾಟಕ ಬ್ಯಾಂಕ್, ಕುಂಜಿಬೆಟ್ಟು ಬ್ರಾಂಚ್, ಬ್ಯಾಂಕಿನ ಖಾತೆಗೆ ನೇರವಾಗಿ ಜಮಾ ಮಾಡಿ ಅದರ ರಶೀದಿಯನ್ನು ಮೇಲಿನ ನಮ್ಮ ಇ-ಮೇಯ್ಲ್/ವಾಟ್ಸ್ಆ್ಯಪ್ ವಿಳಾಸಕ್ಕೆ ಕಳುಹಿಸಬಹುದು. ಖಾತೆಯ ಹೆಸರು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ, ಖಾತೆಸಂಖ್ಯೆ : 8032500102881601 at Karnataka Bank, Kunjibettu Branch, Udupi IFSC Code KARB0000803

**ಸಮಾಜ ಬಾಂಧವರು ಪತ್ರಿಕೆಯನ್ನು ತುಂಬು ಹೃದಯದಿಂದ ಪ್ರೋತ್ಸಾಹಿಸುವಂತೆ ವಿನಂತಿ**

# ಶ್ರೀಶಾರದಾ ವೇದಿಕೆಯ ಮಹಾಪೋಷಕರು

**ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎಸ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್**

# ಸ್ವಚ್ಛ ಮಂಗಳೂರು ಅಭಿಯಾನ




ಶ್ರೀ ರಾಮಕೃಷ್ಣ ಮಿಶನ್ ನೇತೃತ್ವದಲ್ಲಿ ನಡೆಯುವ ಸ್ವಚ್ಛ ಮಂಗಳೂರು ಅಭಿಯಾನದ ಪ್ರಯುಕ್ತ ತಾ.23.10.2016ರಂದು ಶ್ರೀ ಸುಬ್ರಹ್ಮಣ್ಯ ಸಭಾದ ಬಳಗವು ಕರಂಗಲ್ಪಾಡಿ, ಬಿಜೈ ಚರ್ಚ್ ರಸ್ತೆಯಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಸಿತು. ರಾಮಕೃಷ್ಣ ಮಿಶನ್‌ನ ಶ್ರೀ ಚಿದಂಬರಾನಂದಜೀಯವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸುಮಾರು 70ಕ್ಕೂ ಅಧಿಕ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಶ್ರೀ ಸಭಾದ ಅಧ್ಯಕ್ಷ ಶ್ರೀ ಎಂ.ಆರ್. ವಾಸುದೇವ, ಅಭಿಯಾನದ ಸಂಚಾಲಕರಾದ ಶ್ರೀ ಪಿ.ಶ್ರೀಕಾಂತರಾವ್, ಶ್ರೀ ಮನೀಶ್ ರಾವ್ ಯು., ರೋಟರಿ ಕ್ಲಬ್‌ನ ಶ್ರೀ ರಂಗನಾಥ್ ಕಿಣಿ, ಶ್ರೀ ಅನಿಲ್ ರಾವ್ ಬಿ.ಎಸ್., ಯುವ ಮೋರ್ಚಾದ ಶ್ರೀ ನಂದನ್ ಮಲ್ಯ, ಮ.ನ.ಪಾ. ಸದಸ್ಯ ಶ್ರೀ ಪ್ರಕಾಶ್ ಸಾಲ್ಯಾನ್, ಎಂ.ಸಿ.ಎಫ್‌ನ ಶ್ರೀ ಪ್ರಭಾಕರ್ ರಾವ್ ಕೆ., ಶ್ರೀ ಸಭಾದ ವಸತಿ ನಿಲಯದ ಅಧ್ಯಕ್ಷರಾದ ಶ್ರೀ ಆದರ್ಶ ಶಾಸ್ತ್ರಿ ಸಹಿತ ಹಲವಾರು ಗಣ್ಯರು ಪಾಲ್ಗೊಂಡಿದ್ದರು.

**ಚಿತ್ರ : ಶ್ರೀ ರಘುವೀರ್ ಪೆರ್ಡೂರ್** ವರದಿ:ಶ್ರೀ.ಪಿ.ಶ್ರೀಕಾಂತ ರಾವ್

## ಉಡುಪಿ ನಗರ ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಶ್ರೀಮತಿ ರಜನಿ ಹೆಬ್ಬಾರ್



ಉಡುಪಿ ನಗರ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಉಡುಪಿ ಬೈಲಕೆರೆಯ ಶ್ರೀಮತಿ ರಜನಿ ಹೆಬ್ಬಾರ್ ಆಯ್ಕೆಯಾಗಿದ್ದು, ಇತ್ತೀಚೆಗೆ ನಡೆದ ಪದಗ್ರಹಣ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಿದರು. ಬಿಜೆಪಿಯ ಜಿಲ್ಲಾಧ್ಯಕ್ಷರು ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದು, ಶುಭ ಹಾರೈಸಿದರು. ಶ್ರೀಮತಿ ರಜನಿ ಹೆಬ್ಬಾರ್ ಇವರ ಅಧಿಕಾರಾವಧಿಯಲ್ಲಿ ಅವರಿಗೆ ಹೆಚ್ಚಿನ ಯಶಸ್ಸು ಸಿಗಲಿ ಎಂದು ಶ್ರೀಶಾರದಾ ಬಳಗದ ಅಭಿನಂದನೆಗಳು.

## ನಿಧನ



ಉಡುಪಿ ಲಕ್ಷ್ಮೀಂದ್ರ ನಗರದ ನಿವಾಸಿ ಶ್ರೀ ಸಿ.ಬಳ್ಳಾರಿ ದೇವರಾಯರ ಧರ್ಮಪತ್ನಿ ಶ್ರೀಮತಿ ಸಿ.ಶಾಂತಾ ಬ್ಯಾ ಇವರು ತಾ. 11–10–2016 ರಂದು ನಿಧನ ಹೊಂದಿದರು.

**** ****



ದಿ| ಎರ್ಮಾಳು ರಾಮರಾಯರ ಧರ್ಮಪತ್ನಿ ಶ್ರೀಮತಿ ಸೀತಾಲಕ್ಷ್ಮಿ ಇವರು ತಾ.15–10–2016 ನೇ ಶನಿವಾರ ನಿಧನ ಹೊಂದಿದರು.

**** ****



ಎಲ್ಲೂರು ಸಜೆ ನಿವಾಸಿ ದಿ| ಶ್ರೀ ಸರ್ವೋತ್ತಮ ರಾಯರ ಪತ್ನಿ ಶ್ರೀಮತಿ ಕಾಶಮ್ಮ ಇವರು ತಾ.01–11–2016ರಂದು ನಿಧನ ಹೊಂದಿದರು.

**** ****



ನಿವೃತ್ತ ಬ್ಯಾಂಕ್ ಉದ್ಯೋಗಿ ಉಡುಪಿ ಬೈಲಕೆರೆ ನಿವಾಸಿ ಬೈಲಕೆರೆ ರಾಮಚಂದ್ರ ರಾಯರು ತಾ.24–10–2016ನೇ ಸೋಮವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "ಪಾರಾಯಣ" ಸಂಜೆ ಗಂಟೆ 4-30ರಿಂದ

**ತಾ.17-11-2016 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.01-11-2016 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.18-11-2016 ಮತ್ತು ತಾ.04-12-2016 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ವಿಳಾಸ ಬದಲಾವಣೆ

ಬೆಂಗಳೂರಿನಲ್ಲಿ ವಾಸವಾಗಿದ್ದ ಸಿಂಡಿಕೇಟ್ ಬ್ಯಾಂಕಿನ ಜನರಲ್ ಮೇನೇಜರ್‌ರಾದ ಶ್ರೀ ಐ.ಪಿ. ನಾಗರಾಜರಾಯರು ಮಂಗಳೂರಿನ ಈ ಕೆಳಗಿನ ನಿವಾಸಕ್ಕೆ ತಮ್ಮ ವಿಳಾಸವನ್ನು ಬದಲಾಯಿಸಿದ್ದಾರೆ.

ಮನೆ ನಂ.16–88/5(1), "ರಾಜೇಶ್ವರಿ", ಅವಿನಾಶ ಮೋಸ್ಟಾಕ್ಸ್ ಬಳಿ, ಪದವು ಮೇಘನ ಮನೆ ರಸ್ತೆ, ಕುಲಶೇಖರ, ಮಂಗಳೂರು–575005. ಮೊಬೈಲ್ : 8277400194

**** ****

ಬೆಂಗಳೂರಿನ ಜಯನಗರದಲ್ಲಿ ವಾಸವಾಗಿದ್ದ ಶ್ರೀ ಸುದರ್ಶನ ರಾವ್ ಪಿ ಇವರು ನಂ.393, ಶ್ರೀ ಲಲಿತೆ, ಎರಡನೆಯ A ಅಡ್ಡ ರಸ್ತೆ, ಎಂಟನೆಯ ಮುಖ್ಯ ರಸ್ತೆ, ಎಮ್.ಎಸ್ ರಾಮಯ್ಯ ಸಿಟಿ, ಜೆ.ಪಿನಗರ ಎಂಟನೆಯ ಹಂತ, ಬೆಂಗಳೂರು–76 ಇಲ್ಲಿಗೆ ತಮ್ಮ ನಿವಾಸವನ್ನು ಬದಲಾಯಿಸಿದ್ದಾರೆ. ಫೋನ್ ಸಂಖ್ಯೆ 08025837727 ಹಾಗೂ 9483549636

## ನೂತನ ವಿಳಾಸ

**ಶ್ರೀಮತಿ ಸರೋಜಿನಿ,** W/o ದಿ| ಸುಬ್ರಹ್ಮಣ್ಯ ಸ್ವಾಮಿ, ದುರ್ಗಾಪರಮೇಶ್ವರಿ ದೇವಸ್ಥಾನದ ಹಿಂಬದಿ, ಮೂರನೆಯ ಅಡ್ಡರಸ್ತೆ, ಮೊದಲನೆಯ ಮನೆ, ಪುತ್ತೂರು, ಅಂಬಾಗಿಲು, ಉಡುಪಿ.

**** ****

**ಶ್ರೀ ರಾಮಚಂದ್ರ ರಾವ್ ಕೆ.ಜಿ.** S/o ಶ್ರೀ ಗಣಪತಿ ರಾವ್, ಕಾರ್ತಿಕೇಯ 5ನೇ ಅಡ್ಡ ರಸ್ತೆ, ಸುಬ್ರಹ್ಮಣ್ಯ ನಗರ, ಪುತ್ತೂರು ಗ್ರಾಮ, ಅರಿತೋಡು ಜನಾರ್ಧನ ಸುಬ್ರಹ್ಮಣ್ಯ ದೇವಸ್ಥಾನದ ಬಳಿ, ಉಡುಪಿ.

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894



**RAJESH POWER PRESS**

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS

*With Best Complimemts From*

SRI M. SHAILESH RAO
B.E., Civil
Ph : 9448624324

Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

# ಸೀಮೋಲ್ಲಂಘನ-ಪೂರ್ವ ಸಮುದ್ರದಾಚೆಗೆ - ಜಿ ಕೆ.ಕೋಲ್ಪೆ

(....ಕಳೆದ ಸಂಚಿಕೆಯಿಂದ)

ತಾ.17-05-2016 ಸಿಂಗಾಪುರದಲ್ಲಿ ವಿಶ್ರಾಂತಿ ದಿನ, ಅಂದರೆ ಪಟ್ಟಣ ಸುತ್ತಾಡಲು ಹಾಗೂ ವಸ್ತುಗಳನ್ನು ಖರೀದಿಸಲು. 'ಮುಸ್ತಾಫಾ ಸೆಂಟರ್' ಸಿಂಗಾಪುರದಲ್ಲಿ ಹೆಸರುವಾಸಿಯಾದ ವ್ಯಾಪಾರ ಸ್ಥಳ (Marketing centre) ಹಣ ಇದ್ದವರಿಗೆ ಎಲ್ಲವೂ ಇದೆ. ನಮ್ಮಲ್ಲಿಯ ಬೆಲೆ ಲೆಕ್ಕ ಹಾಕಿದರೆ 2-3 ಪಟ್ಟು ಹೆಚ್ಚು ಬೆಲೆ ತೆರಬೇಕು. ನಾವಿದ್ದ ಈ ಭಾಗದಲ್ಲಿ ಭಾರತೀಯರ ಸಂಖ್ಯೆ, ಅದರಲ್ಲೂ ತಮಿಳುನಾಡಿನವರು ಜಾಸ್ತಿ ಇದ್ದು, ಹೆಚ್ಚಿನವರು ಶಿಸ್ತಿನ ಜೀವನ ನಡೆಸುತ್ತಾ ವ್ಯಾಪಾರ-ವ್ಯವಹಾರ, ಅಂಗಡಿಗಳಲ್ಲಿ, ಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಾ ಸಂಬಳದ ಹೆಚ್ಚಿನ ಭಾಗ ಅವರವರ ಊರಿಗೆ ಕಳಿಸಿ ಸಂಸಾರ ನಿರ್ವಹಣೆ ಮಾಡುತ್ತಾರಂತೆ (ವಾಸಕ್ಕೆ ಬಿಡಾರ ಇತರ ಸವಲತ್ತು ಮುಫತ್ತಾಗಿ ಪಡೆಯುವವರೂ ಇದ್ದಾರೆ.) ನಾವು ಕೆಲವರು ಹೋಟೇಲಿನ ಪಕ್ಕದಲ್ಲಿರುವ ಸುಂದರ ಹಿಂದೂ ದೇವಾಲಯಕ್ಕೆ ಹೋಗಿ (ಭಾರತದ ಹೆಚ್ಚಿನ ದೇವರುಗಳ ನವಗ್ರಹಗಳು ಸಹಿತ ಸುಂದರ ವಿಗ್ರಹಗಳು ಇಲ್ಲಿವೆ) ಪೂಜೆ ನೆರವೇರಿಸಿ ಕೃತಾರ್ಥರಾದೆವು. ರಾತ್ರಿ ನಾವೆಲ್ಲ ವಾಸ್ತವ್ಯದ ಹೋಟೇಲಿನಲ್ಲಿ ಒಂದು ಕಡೆ ಸೇರಿ, ಮೂರನೇ ದಿನ ನಮ್ಮ 11 ಜನರ ಗುಂಪು ಥ್ಯಾಲೇಂಡ್‌ಗೆ ಹಾಗೂ ಉಳಿದವರು ಬೆಂಗಳೂರಿಗೆ ಹೊರಟ ಕಾರಣ (Tour Manger) ಶ್ರೀ ಸಂದೀಪ್ ಪೈ ಸಹಿತ ''ವಿದಾಯ ಸಭೆ'' ಸೇರಿ ಅನುಭವಗಳನ್ನು ಹಂಚಿಕೊಂಡೆವು ಗುಂಪು ಫೋಟೋ (Group photo) ತೆಗೆಸಿಕೊಂಡು, ಉತ್ತಮ ವಾಸ್ತವ್ಯ ವ್ಯವಸ್ಥೆ, ಮಾರ್ಗದರ್ಶಕರು (Guides) ಊಟೋಪಚಾರ, ಸಮಯ ನಿಭಾವಣೆ (Time keeping), ಪಾಸ್‌ಪೋರ್ಟ್ ಹಾಗೂ ವೀಸಾ ಪರಿಶೀಲನೆಗೆ ಮಾಹಿತಿಕೊಡುತ್ತಾ ಈ ಪ್ರವಾಸ ಪ್ರತಿಯೊಬ್ಬರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯಲು ಕಾರಣರಾದ ವಾತಿಕಾ ಇಂಟರ್ನೇಶನಲ್ ಟ್ರಾವೆಲ್ಸ್ ಸಂಸ್ಥೆಗೆ ಮೆಚ್ಚುಗೆ ವ್ಯಕ್ತಪಡಿಸಲಾಯಿತು. ಅನಂತರ Tour ಮೆನೇಜರರಿಗೆ ಎಲ್ಲರ ವತಿಯಿಂದ ನೆನಪಿನ ಕಾಣಿಕೆ ಕೊಡಲಾಯಿತು ಬೆಂಗಳೂರಿಗೆ ಹಿಂತಿರುಗುವ (ಅವರು ಮಲೇಷ್ಯಾ ಮತ್ತು ಸಿಂಗಾಪುರ ಮಾತ್ರ ಆಯ್ಕೆ ಮಾಡಿಕೊಂಡವರು) ಸ್ನೇಹಿತರಿಗೆ ವಿದಾಯ ಹೇಳಿ ವಿರಮಿಸಿದೆವು

**ತಾ.18-05-2016 ಥ್ಯಾಲ್ಯಾಂಡ್‌ಗೆ**

ನಮ್ಮ ಹನ್ನೊಂದು ಜನರ ಗುಂಪು ಬೆಳಗ್ಗೆ ಬ್ಯಾಂಗ್‌ಕೋಕ್‌ಗೆ (ಥೈಲ್ಯಾಂಡ್‌ನ ರಾಜಧಾನಿ) ಏಯರ್ ಏಷ್ಯಾ ವಿಮಾನದಲ್ಲಿ ಸಿಂಗಾಪುರದಿಂದ ಹೊರಟೆವು, 'ವಿಮಾನದಲ್ಲಿ ಗಗನ ಸಖಿಗಳು'' ಹೆಚ್ಚಿನವರಿಗೆ ತಿಂಡಿ ಹಂಚುತ್ತಾ ಬಂದರೂ, ನಮಗೆ ಏನೂ ಸಿಗಲಿಲ್ಲ, ನನ್ನ ಮೊಮ್ಮಗಳು ಏಯರ್ ಲಂಕಾದ ಲಂಕಿಣಿಯರು ಕೊಟ್ಟ ಊಟೋಪಚಾರವನ್ನು ನೆನೆಯುತ್ತಾ, 'ಇವರಿಗೆ ಒಂದು ಚಾಕಲೇಟ್ ಕೊಡುವ ಯೋಗ್ಯತೆ ಇಲ್ಲ'' ಎಂದು ಗೊಣಗಿದಳು, ವಿಚಾರಿಸುವಾಗ, ಟಿಕೆಟ್ ಪಡೆಯುವಾಗಲೇ ಹೆಚ್ಚಿನ ಹಣ ಪಾವತಿಸಿದರೆ ಮಾತ್ರ ಈ ಸೌಲಭ್ಯ ಸಿಗುತ್ತದೆಯೆಂದು ತಿಳಿಯಿತು. ಮಧ್ಯಾಹ್ನ 12.30ಕ್ಕೆ ತಲಪಿ ಬ್ಯಾಂಗ್‌ಕೋಕ್ DMK ವಿಮಾನ ನಿಲ್ದಾಣದಲ್ಲಿ 'ವೀಸಾ ಪಡೆಯಲು ಒಂದು ತಾಸು ಸರದಿಯಲ್ಲಿ ನಿಂತು ಹೊರಬಂದ ನಮ್ಮನ್ನು ಶ್ರೀಮತಿ ನೀನಾ ಎಂಬ ಸುಮಾರು 40ರ ಹರೆಯದ ಥ್ಯಾ ಮಹಿಳೆ ಆತ್ಮೀಯವಾಗಿ ಸ್ವಾಗತಿಸಿ, ಎರಡು ಸಣ್ಣ ವಾಹನಗಳಲ್ಲಿ (ಒಂದರಲ್ಲಿ ನಾವು-ಇನ್ನೊಂದರಲ್ಲಿ ನಮ್ಮ ಲಗ್ಗೇಜು) ಸುಮಾರು 60 ಕಿ.ಮೀ ದೂರದ 'ಪಟ್ಟಾಯಾ' ಎಂಬ ನಗರಕ್ಕೆ ಕರಕೊಂಡು ಹೋಗಿ 'ಹೋಟೇಲ್ ಬಿವರ್‌ಲೀ ಪ್ಲಾಜಾ' ದಲ್ಲಿ ವಸತಿ ಸೌಕರ್ಯ ಕಲ್ಪಿಸಿದಳು. ಸಂಜೆ ಅಲ್ಕಯಥಾರ್ (Alcazar show)ಎಂಬ ನೃತ್ಯ ಪ್ರದರ್ಶನಕ್ಕೆ ಹೊರಟೆವು. ಥ್ಯಾ ನೃತ್ಯಾಗಾತಿಯರು ದೇವತೆಗಳಂತೆ ಅಲಂಕರಿಸಿಕೊಂಡು, ದೊಡ್ಡ ರಂಗ ಮಂಟಪದಲ್ಲಿ ಬಣ್ಣ ಬಣ್ಣದ ದೀಪಗಳ ಬೆಳಕಿನಲ್ಲಿ ಕುಣಿಯುವ ನೃತ್ಯ ರೂಪಕ ವರ್ಣನಾತೀತ, ಕಡೆಗೆ ನೃತ್ಯಗಾತಿಯರೊಂದಿಗೆ ಫೋಟೋ ಕ್ಲಿಕ್ಕಿಸುವವರ ಅವಸ್ಥೆ ನೋಡಿ, ಹೋಟೇಲ್‌ಗೆ ಹಿಂತಿರುಗಿದೆವು.

ಮೂರನೇ ದಿನ (ತಾ.19-05-2016) ಪಟ್ಟಯದಲ್ಲಿ Coral Island ಅಂದರೆ ಹವಳ ದ್ವೀಪದ ವೀಕ್ಷಣೆಗೆ ಹೊರಟೆವು, ಗೈಡ್ ನೀನಾಳ ಸಾರಥ್ಯದಲ್ಲಿ ಯಾಂತ್ರೀಕೃತ ವೇಗದೋಣಿಯಲ್ಲಿ (Speed Boat) (ಲಾಂಚ್) ಪ್ರಯಾಣ ಪ್ರಾರಂಭಿಸಿದೆವು. ನನ್ನ ಮಗಳು ಮೊಮ್ಮಗಳು ಸುಮಾರು 30 ಅಡಿಗಳ ಆಳ ಸಮುದ್ರದಡಿಯಲ್ಲಿ ಉಸಿರಾಟದ ವ್ಯವಸ್ಥೆಯ ಮುಖ ಕವಚದೊಂದಿಗೆ (ನೀರಿನಲ್ಲಿ ನೋಡುವಂತಹ) ಬೇರೊಂದು ಲಾಂಚಲ್ಲಿ ಪ್ರಯಾಣಿಸಿದರು. ಈ ಪ್ರಯಾಣಕ್ಕೆಸ್ವಲ್ಪ ಖರ್ಚು ಜಾಸ್ತಿ. ಸಮುದ್ರ ದಡಿಯಲ್ಲಿ ಜಲಚರಗಳು, ಮೀನುಗಳು, ಹವಳದ ಹುಳುಗಳು ಇತ್ಯಾದಿ ನೋಡುತ್ತಾ, ನಾವು ದಡ ತಲಪಿದ ಸುಮಾರು ಅರ್ಧ ತಾಸಿನ ನಂತರ ನಮ್ಮ ಆತಂಕ ನಿವಾರಿಸಿ ಮೇಲೆ ಬಂದರು. ತಮ್ಮ ಅನುಭವವನ್ನು ಎಲ್ಲರಿಗೂ ವರ್ಣಿಸಿದರು. ಅವರ ಧೈರ್ಯವನ್ನು ಎಲ್ಲರೂ ಮೆಚ್ಚಿಕೊಂಡರು.

ದ್ವೀಪದಿಂದ ಹಿಂತಿರುಗಿಬಂದವರು ನೋಂಗ್‌ನೂಚ್ Tropical garden (ಉಷ್ಣ ವಲಯದ ಉದ್ಯಾನಕ್ಕೆ )ಭೇಟಿ ನೀಡಿ ಆನೆಗಳ ವಿವಿಧ ಆಟಗಳನ್ನು, ನೃತ್ಯ ವೈಭವ ಇತ್ಯಾದಿ ನೋಡಿ ನಮ್ಮ ವಾಸ್ತವ್ಯಕ್ಕೆ ಹಿಂತಿರುಗಿದೆವು. ನಮ್ಮ ಗೈಡಮ್ಮ 'ಪಟ್ಟಾಯ ಪಟ್ಟಣದ ಮಹಿಳೆಯರದ್ದೇ ಕಾರುಬಾರು ಜಾಸ್ತಿ. ಎಲ್ಲಾ ಉದ್ಯೋಗಗಳಲ್ಲೂ ತಮ್ಮ ಶ್ರಮ, ಚಾಕಚಕ್ಯತೆ ಮೆರೆಯುತ್ತಾರೆ. ಪ್ರವಾಸಿಗರನ್ನು ಆಕರ್ಷಿಸಿ ತಮ್ಮ ವ್ಯಾಪಾರ/ವಹೀವಾಟು ನಡೆಸುತ್ತಾರೆ. ವಂಚನೆ/ಮೋಸ ಕಡಿಮೆ. ಇಲ್ಲಿಯ ಮಸಾಜ್ (ತೇಲ್ ಮಾಲಿಷ್) ಕಾಯಕ ರಸ್ತೆ ಉದ್ದಕ್ಕೆ, ಅದಕ್ಕೆಂದೇ ಮೀಸಲಾದ ಅಂಗಡಿಗಳಲ್ಲಿ ಸಂಜೆಯಾಗುತ್ತಿದ್ದಂತೆ, ಕಾಣ ಬಹುದು ಸುಂದರಾಂಗಿಯರು. ದೇಹದ ಭಾಗಗಳಿಗೆ ಎಣ್ಣೆಹಚ್ಚಿ (ಕೈ-ಕಾಲು-ಇಷ್ಟಪಟ್ಟರೆ ಪೂರ್ತಿದೇಹಕ್ಕೆ) ಮಸಾಜ್ ಮಾಡಿ ದೇಹಕ್ಕೆ ಚೈತನ್ಯ ತುಂಬುತ್ತಾರೆ. ಇದಕ್ಕಾಗಿ ಬಹಳಷ್ಟು ಪ್ರವಾಸಿಗರು ಈ ಸೇವೆಯನ್ನು ಹಣಕೊಟ್ಟು ಸದುಪಯೋಗಿಸುತ್ತಾರೆ. ಈ ಕಾಯಕದಿಂದ ಸಾವಿರಾರು ಕುಟುಂಬಗಳು ಜೀವನ ಸಾಗಿಸುತ್ತಾರಂತೆ. ಇಲ್ಲಿ ''ದಾರಿ ತಪ್ಪುವ'' ಪ್ರವಾಸಿಗರು ಅಪಾಯದಲ್ಲಿ ಸಿಲುಕುವ ಸಂಭವವೂ ಇದೆಯಂತೆ, ''ಗೈಡ್ ನೀನಮ್ಮ'' ಈ ವಿಷಯಗಳನ್ನು ಪ್ರಸ್ತಾಪಿಸುತ್ತಾ ಇಲ್ಲಿಯ ಜನಜೀವನದ ಬಗ್ಗೆ ಬೆಳಕು ಚೆಲ್ಲುತ್ತಾ (ಸರಿ ಅರ್ಥವಾಗದ ಆಂಗ್ಲ ಭಾಷೆಯಲ್ಲಿ) ನಮ್ಮನ್ನು ಹೋಟೇಲಿಗೆ ತಲಪಿಸಿ, ತನ್ನ ,ಮನೆಗೆ ಹಿಂತಿರುಗಿದಳು. ಪಟ್ಟಯದಿಂದ ಬ್ಯಾಂಕಾಕ್‌ಗೆ ತಾ.20-05-2016ರಂದು ಬೆಳಗ್ಗೆ 9 ಗಂಟೆಗೆ ಹೊರಟವರು ಮಾರ್ಗದರ್ಶಕಿ ನೀನಮ್ಮನೊಂದಿಗೆ Gems Discovery ಎಂಬ ವಜ್ರ-ಹಸಿರು (ಪಚ್ಚೆ)-ನೀಲಿ ಇತ್ಯಾದಿ ಹರಳುಗಳು ಉತ್ಪತ್ತಿಯಾಗುವ ಕ್ರಮ, ನಂತರ ಅದರ ಆಭರಣಗಳ ತಯಾರಿ ಮಾಡುವ ಕಾರ್ಖಾನೆಯನ್ನು ದಾರಿಮಧ್ಯದಲ್ಲಿ, ನಮ್ಮ ಕಾರ್ಯಕ್ರಮದಲ್ಲಿ ಇಲ್ಲದಿದ್ದರೂ, ಅವಳ ಸ್ವಇಚ್ಛೆಯಿಂದ ತೋರಿಸಿದಳು, ಅಗಾಧವಾದ ಕಟ್ಟಡದ ತಳಭಾಗದಲ್ಲಿ ಚಲಿಸುವ ಸಣ್ಣ ರೈಲುಗಾಡಿಯಲ್ಲಿ ಕೂತು, ಭೂಕಂಪದಿಂದ ಜ್ವಾಲಾಮುಖಿ ಉತ್ಪನ್ನವಾಗಿ, ಲಾವಾರಸ ಹರಿದು, ಅದು ಕಲ್ಲುಬಂಡೆ/ಮಣ್ಣಿಗೆ ತಾಗಿ ಗಟ್ಟಿಯಾಗಿ, ಅದರಿಂದ ಅದುರುಗಳನ್ನು ಬೇರ್ಪಡಿಸಿ, ವಿವಿಧ ಹಂತಗಳಲ್ಲಿ ನಿಸರ್ಗ ಸಂಪತ್ತನ್ನು ಪಡೆಯುವ ಕ್ರಮ ನೋಡುವಂತದ್ದು ತದನಂತರ ಹರಳುಗಳನ್ನು ಪರಿಷ್ಕರಿಸಿ, ಆಭರಣ ತಯಾರು ಮಾಡುವ ಕೆಲಗಾರರ ನೈಪುಣ್ಯತೆಯನ್ನು ನೋಡುವ ಭಾಗ್ಯ ನಮಗೆ ಲಭಿಸಿತು. ಈ ಜಾಗದಲ್ಲಿ ಮಾರಾಟ ಕೇಂದ್ರವೂ ಇದೆ. ಧನಬಲವಿದ್ದವರು ಖರೀಧಿಸುತ್ತಾರೆ. ಇತರ ರಾಷ್ಟ್ರಗಳಿಗಿಂತ ಕಡಿಮೆ ಬೆಲೆಯಲ್ಲಿ ಲಭ್ಯವಂತೆ. ಮಧ್ಯಾಹ್ನ baiyoke Boutique ಎಂಬ ಹೋಟೇಲಿನಲ್ಲಿ ವಾಸ್ತವ್ಯ. ಅನಂತರ ಸಿಟಿ ಮತ್ತು ಟೆಂಪಲ್ ಟೂರ್. ಹಿಂದೂ ಪುರಾಣಗಳ ಪ್ರಕಾರ ಭಗವಂತನ ದಶಾವತಾರಗಳಲ್ಲೊಂದಾದ 'ಬೌದ್ಧಾವತಾರ' ಭಾರತದಲ್ಲೇ ಸಂಭವಿಸಿದರೂ, ಅದು ಬಹಳ ಪ್ರಚಲಿತದಲ್ಲಿರುವುದು ಪೂರ್ವರಾಷ್ಟ್ರಗಳಲ್ಲಿ ಥ್ಯಾಲೇಂಡಿನ ರಾಜದಾನಿ ಬ್ಯಾಂಗ್‌ಕೋಕ್ ನಗರದಲ್ಲಿ, ಬೌದ್ಧ ದೇವಳಗಳು, ಸ್ತೂಪಗಳು, ಹಾಗೂ ಪಗೋಡಾಗಳು ಬಹಳಷ್ಟಿವೆ. ಇವನ್ನು ನೋಡುತ್ತಾ ಇದ್ದಂತೆ, ಬೌದ್ಧಧರ್ಮದ ತಿರುಳಾದ Misery ಅಂದರೆ ಅತೀವ ಕಷ್ಟ, ದುಃಖಾವಸ್ಥೆ, ಕಡುಬಡತನ, ವಿಪತ್ತು, ಇತ್ಯಾದಿಗಳನ್ನು ಹೋಗಲಾಡಿಸಲು ಮನುಕುಲ ಮಾಡಬೇಕಾದ ಕರ್ತವ್ಯಗಳನ್ನು-(ಅತಿಯಾಸೆ ಮಾಡದಿರುವ) ಬೋಧಿಸಿ ಬೌದ್ಧಮತ ಸ್ಥಾಪಿಸಿ ಜೀವನ್ಮುಕ್ತಿ ಹೊಂದಿದ ಭಗವಾನ್ ಬುದ್ಧನ ಕಥೆ ಭಾರತೀಯರಿಗೆ ತಿಳಿದದ್ದೇ. ಇಲ್ಲಿ ಬೌದ್ಧ ದೇವಸ್ಥಾನಗಳಲ್ಲಿ, ನಾವು ನೋಡಿದ ರಿಕ್ಲೈನಿಂಗ್ ಬುದ್ಧ (ಅಂದರೆ ನಿದ್ರಾ ಭಂಗಿಯಲ್ಲಿರುವ ಬುದ್ಧ) 46 ಮೀಟರ್ ಉದ್ದವಿದ್ದು ಬಂಗಾರ ಬಣ್ಣದ ಲೇಪನವಿದೆ, ಕೂತ ಭಂಗಿಯಲ್ಲಿ ಧ್ಯಾನದಲ್ಲಿ ಹಾಗೂ ನಿಂತಿರುವ ವಿಗ್ರಹಗಳ ಚಂದ ವರ್ಣನಾತೀತ, ಹಾಗೇ ಇಲ್ಲಿಯ ಮೊನಾಸ್ಟ್ರಿ (monastry)ಯೊಂದರಲ್ಲಿರುವ ಕೂತಭಂಗಿಯ ಬಂಗಾರದ ವಿಗ್ರಹ (ಬ್ಯಾಂಕಾಕ್ ಆಸ್ಪತ್ರೆಯ ಕಟ್ಟಡದ ಎದುರು) ನೋಡಲೇ ಬೇಕಾದ್ದು, 'ಬುದ್ಧಂ ಶರಣಂ ಗಚ್ಛಾಮಿ'' ಎಂಬ ಮಂತ್ರ ಮನದಲ್ಲಿ ಪಠಿಸುತ್ತಾ ಬುದ್ಧದೇವಳ ಸಮುಚ್ಛಯದಿಂದ ಹೊರಬಂದೆವು.

ಸಂಜೆಯಾಗುತ್ತಾ, ''ಚಾಯೋಪ್ರಾಯಾ'' ನದಿಯ ಮೇಲೆ ವಿಶಾಲವಾದ, ವೈಭವೋಪೇತ ನಾವೆಯಲ್ಲಿ ಪ್ರಯಾಣ ಮಾಡುತ್ತಾ ಪಟ್ಟಣದ ಸೌಂದರ್ಯ ಸವಿಯುತ್ತಾ, ಹೊಟ್ಟೆಬಿರಿಯುವಷ್ಟು ತಿನ್ನುತ್ತಾ ಮೋಜು, ಮಸ್ತಿ, ಡೇನ್ಸ್ ಮಾಡುತ್ತಾ ಸಮಯ ಕಳೆದದ್ದು ಗೊತ್ತಾಗಲೇ ಇಲ್ಲ, Dinner with Dance ಕಾರ್ಯಕ್ರಮ ಅತ್ಯಂತ ಮನರಂಜನೆಯದ್ದಾಗಿದೆ. ಈ ನಾವೆಯಲ್ಲಿ ಹೆಚ್ಚಿನವರು ಭಾರತೀಯ ಪ್ರವಾಸಿಗರು, ಮೈಕ್ ಹಿಡಿದುಕೊಂಡು ಹಾಡುಹೇಳುತ್ತಾ ಎಲ್ಲರನ್ನೂ ಕುಣಿಸುವ ಸುಂದರಿ, ವಿವಿಧ ಭಾಷೆಯ ಹಾಡುಗಳ ಕ್ಯಾಸೆಟ್ ಹಾಕಿಸಿ, ಆಯಾ ಭಾಗದ ಜನರು ಕುಣಿಯುವಂತೆ ಪ್ರೋತ್ಸಾಹಿಸಿ ಕುಣಿಸಿದಳು, ಕನ್ನಡದ ವರನಟ ರಾಜಕುಮಾರರ ''ಹುಟ್ಟಿದರೆ ಕನ್ನಡನಾಡಲ್ಲಿ ಹುಟ್ಟಬೇಕು'' ಎಂಬ ಹಾಡಿಗೆ ಹೆಚ್ಚಿನ ಕನ್ನಡಾಭಿಮಾನಿಗಳು ಕುಣಿದು ಕುಪ್ಪಳಿಸಿದರು, ನಾನು, (75ರ ತರುಣ) ಕೂಡಾ ಹೆಜ್ಜೆಹಾಕಿದೆ, ನನ್ನ ಮೊಮ್ಮಗಳ Hiphop ಎಂಬ ಪಾಶ್ಚಾತ್ಯ ನಾಟ್ಯ, ಕರ್ನಾಟಕ/ಮಹಾರಾಷ್ಟ್ರದ ಕೆಲವು ಹುಡುಗಿಯರು/ಮಹಿಳೆಯರ ಮನಸೂರೆಗೊಂಡು ಅವರೆಲ್ಲಾ ಅವಳೊಂದಿಗೆ ಹೆಜ್ಜೆ ಹಾಕುವಂತಾಯ್ತು, ನನ್ನ ಮಗಳೂ ಕೆಲವು ಹಾಡಿಗೆ ಹೆಜ್ಜೆ ಹಾಕಿದರು, ನಮ್ಮ ಗುಂಪಿನ ಒಂದಿಬ್ಬರು ಕಾಲು ಆಡಿಸಿದರು, ಇತರ ಭಾಷೆಯ ಹಾಡುಗಳು ಕೇಳಿಬಂದು, ಆ ಭಾಷಾವಾರು ಜನರು ಕುಣಿದು ಸಂತೋಷಪಟ್ಟರು. ಅಂತೂ ಸುಮಾರು ಒಂದುವರೆ ತಾಸು ನದಿ ಪ್ರಯಾಣದ ನಂತರ, ದಡ ಸೇರಿದಾಗ 'ಭಾರತಮಾತಾಕೀ ಜೈ'' ಎಂಬ ಘೋಷಣೆಗಳು ಕೇಳಿಬಂದವು ನಾವೆಯ ಮೇಲಿನ ಅಂತಸ್ತಿನಲ್ಲಿ ನಾವಿದ್ದು, ಕೆಳಅಂತಸ್ತು ವಾತಾನುಕೂಲಿಯಾಗಿತ್ತು. (ಅದಕ್ಕೆ ಜಾಸ್ತಿ ಹಣ ಪಾವತಿಸಬೇಕಾಗುತ್ತದೆ) ಈ ಮರೆಯಲಾರದ ಅನುಭವ ಹೊತ್ತುಕೊಂಡು ಹೋಟೇಲಿಗೆ ಹಿಂತಿರುಗಿದೆವು.

ತಾ.21-05-2016 ಬ್ಯಾಂಕಾಕ್‌ನಲ್ಲಿ ಸಫಾರಿ ಪಾರ್ಕ್ ಮತ್ತು ಮೆರೈನ್ ಪಾರ್ಕ್ ಸಂದರ್ಶನಕ್ಕೆ ಮೀಸಲಾಗಿತ್ತು ಸಿಟಿಗೆ ಬಹಳಷ್ಟು ಸಮೀಪವಿರುವ ಈ ಸಪಾರಿ ಪ್ರಪಂಚ'', '' ಸಫಾರಿ ವರ್ಲ್ಡ್‌ಪಬ್ಲಿಕ್ ಕಂಪನಿ ಲಿಮಿಟೆಡ್''ನವರು ನಡೆಸುತ್ತಿದ್ದು, ವಿವಿಧ ಪ್ರಾಣಿಗಳಿಂದ ನಡೆಸುವ ಪ್ರದರ್ಶನಗಳು (ಒಟ್ಟು ಏಳು) ನೋಡಲೇ ಬೇಕಾದ್ದು ಪ್ರಪಂಚದ ದೊಡ್ಡ ಪ್ರಾಣಿ ಸಂಗ್ರಹಾಲಯವಾಗಿದ್ದು ಅತ್ಯಂತ ವೈಶಿಷ್ಟ್ಯ ಪೂರ್ಣವಾಗಿದೆ. ಸೀಲ್ ಪ್ರಾಣಿಗಳು, ವಿವಿಧ ಪಕ್ಷಿಗಳು ಒರಾಂಗೋಟ್, ಡಾಲ್ಫಿನ್‌ಗಳು ಇತ್ಯಾದಿ ಪ್ರಾಣಿಗಳ ಪ್ರದರ್ಶನ/ಆಟ ನಮ್ಮನ್ನು ಆಶ್ಚರ್ಯಪಡಿಸುತ್ತದೆ. ಕೌಬ್ಯಾಶೋ, ಸ್ಪೈವಾರ್ ಡ್ರಾಮಾ, ಹಾರ್ನ್‌ಬಿಲ್‌ಗಳ ಮಳೆ ಕಾಡು, ಮೊಸಳೆ ಪಾರ್ಕ್ ಇತ್ಯಾದಿ ನೋಡಿ ದಣಿದು ಅಲ್ಲೇ ಇರುವ ಇಂಡಿಯನ್ ಹೋಟೇಲಿನಲ್ಲಿ ಮಧ್ಯಾಹ್ನ ಊಟ ಮುಗಿಸಿ, ಸಂಜೆಯಾಗುತ್ತಿದ್ದಂತೆ ಹೋಟೇಲ್‌ಗೆ ಹಿಂತಿರುಗಿ ವಿಶ್ರಾಂತಿ ಪಡೆದೆವು.

(8ನೇ ಪುಟಕ್ಕೆ...)

SAMPATH KUMAR

Mobile : 9741508881
8884873233

TRISHULINI TOURIST

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE

ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು
ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

ವೇದಮೂರ್ತಿ ಚಿದಾನಂದ ಭಟ್

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010

ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

ಮೊಬೈಲ್- 9886629697, 9986119865

# ಮ.ನಾ.ಹೆಬ್ಬಾರರಿಂದ ಮಾನವೀಯ ಮೌಲ್ಯಗಳ ಬಗ್ಗೆ ಭಾಷಣ




ಪರ್ಕಳ ಪ್ರೌಢಶಾಲೆಯಲ್ಲಿ ಜರಗಿದ ಉಡುಪಿಯ ಹೆಣ್ಣುಮಕ್ಕಳ ಸರಕಾರಿ ಪದವಿಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದಲ್ಲಿ ಒಂದು ಅಪರಾಹ್ನದ ಕಾರ್ಯಕ್ರಮವನ್ನು ಮಲ್ಪೆ ಲಯನ್ಸ್ ಕ್ಲಬ್ ಸಂಯೋಜಿಸಿದ್ದು ಅಂದು ನಿವೃತ್ತ ಉಪನ್ಯಾಸಕ ಶ್ರೀ ಮ.ನಾ.ಹೆಬ್ಬಾರರು "ನೈತಿಕ ಶಿಕ್ಷಣ ಹಾಗೂ ಮಾನವೀಯ ಮೌಲ್ಯಗಳು" ಎಂಬ ವಿಷಯದ ಮೇಲೆ ಶಿಬಿರಾರ್ಥಿಗಳಿಗೆ ಉಪನ್ಯಾಸವನ್ನು ನೀಡಿದರು. ಲಯನ್ಸ್ ಜಿಲ್ಲಾ ಉಪಗವರ್ನರ್ ಶ್ರೀ ತಲ್ಲೂರು ಶಿವರಾಮ ಶೆಟ್ಟಿ ಮತ್ತು ಮಲ್ಪೆ ಲಯನ್ಸ್ ಕ್ಲಬ್ಬಿನ ಅಧ್ಯಕ್ಷೆ ಶ್ರೀಮತಿ ಗಿರಿಜಾ ತಲ್ಲೂರು ಶಿವರಾಮ ಶೆಟ್ಟಿ ಮತ್ತು ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಮ.ನಾ.ಹೆಬ್ಬಾರ್ ರಿಂದ ಪುಸ್ತಕ ಬಿಡುಗಡೆ

ತಾ.01-11-2016 ರ ಕರ್ನಾಟಕ ರಾಜ್ಯೋತ್ಸವದ ಶುಭ ಸಂಧರ್ಭದಲ್ಲಿ ನಿವೃತ್ತ ಉಪನ್ಯಾಸಕರಾದ ಶ್ರೀ ಮುರಳೀಧರ ಹಾಲಂಬಿಯವರು ತಮ್ಮ "ಮೇಸ್ತ್ರು ಕಂಡ ಮೋಜು" ಎಂಬ ಹಾಸ್ಯ ಬರಹಗಳ ಸಂಗ್ರಹವನ್ನು ಉಡುಪಿ ಓಂತಿಬೆಟ್ಟುವಿನಲ್ಲಿರುವ ಶ್ರೀ ಲಕ್ಷ್ಮೀಕೃಪಾ ಸಭಾಗೃಹದಲ್ಲಿ ಪ್ರಸಿದ್ಧ ಹರಿದಾಸರೂ ನಿವೃತ್ತ ಉಪನ್ಯಾಸಕರೂ ಆದ ಶ್ರೀ ಮ.ನಾ.ಹೆಬ್ಬಾರ್‌ರವರ ಮೂಲಕ ಬಿಡುಗಡೆಗೊಳಿಸಿದರು. ಆತ್ರಾಡಿಯಲ್ಲಿರುವ ಸಂದೀಪ ಸಾಹಿತ್ಯ ಮಾಲೆಯ ವತಿಯಿಂದ ನಡೆದ ಈ ಕಾರ್ಯಕ್ರಮದಲ್ಲಿ ಡಾ| ಉಪ್ಪಂಗಳ ರಾಮಭಟ್ಟರು ಅಧ್ಯಕ್ಷರಾಗಿ ಹಾಗೂ ಖ್ಯಾತ ಹಾಸ್ಯ ಸಾಹಿತಿ ಕು.ಗೋ ಇವರು ಮುಖ್ಯ ಅತಿಥಿಗಳಾಗಿಯೂ ಭಾಗವಹಿಸಿದ್ದರು.

# ಪದ್ಮನಾಭ ರಾಯರ ಪುಸ್ತಕ ಬಿಡುಗಡೆ




ಬೆಂಗಳೂರಿನ ನಿವೃತ್ತ ಮುಖ್ಯ ಗ್ರಂಥಾಲಯಾಧಿಕಾರಿಗಳಾದ ಶ್ರೀ ಎನ್.ಪದ್ಮನಾಭರಾವ್ ರವರವರು ರಚಿಸಿರುವ "ಭಾರತ ಸ್ವಾತಂತ್ರ್ಯ ಹೋರಾಟದ ದಿಗ್ಗಜರು ಮತ್ತು ಗ್ರಂಥ ಸುಭಾಷಿತಗಳು" ಎಂಬ ಪುಸ್ತಕದ ಬಿಡುಗಡೆ ಸಮಾರಂಭವು ಗೀತಾಂಜಲಿ ಪಬ್ಲಿಕೇಶನ್ ಬೆಂಗಳೂರು ಹಾಗೂ ಕರ್ನಾಟಕ ರಕ್ಷಣಾ ವೇದಿಕೆಯ ಬೆಂಗಳೂರು ಘಟಕದ ಆಶ್ರಯದಲ್ಲಿ ತಾ.07-10-2016ರಂದು ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು ಇಲ್ಲಿ ನೆರವೇರಿತು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಡಾ| ಎಚ್.ಎಸ್.ದೊರೆಸ್ವಾಮಿ ಇವರು ಪುಸ್ತಕ ಬಿಡುಗಡೆ ಮಾಡಿದರು. ಮಾಜಿ ಶಾಸಕ ಶ್ರೀ ಎ.ಟಿ.ರಾಮಸ್ವಾಮಿ, ಕಾದಂಬರಿಗಾರ್ತಿ ಶ್ರೀಮತಿ ಮಂಗಳಾ ಸತ್ಯನ್, ಲೇಖಕ ಶ್ರೀ ನಿಡಸಾಲೆ ಪುಟ್ಟಸ್ವಾಮಯ್ಯ, ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಶ್ರೀ ಶಿವರಾಮೇಗೌಡ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಪುಸ್ತಕವು ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಅವರು ಬರೆದ ಗ್ರಂಥಗಳು ಹಾಗೂ ಅವರ ಬಗ್ಗೆ ಬರೆದಿರುವ ಗ್ರಂಥಗಳ ಬಗ್ಗೆ ವಿವರಗಳನ್ನೊಳಗೊಂಡಿದೆ.

# ಶ್ರೀ ಕೆ. ವೆಂಟರಮಣ ರಾವ್ ಅವರಿಗೆ ಸನ್ಮಾನ



ಮಹಾರಾಷ್ಟ್ರದ ಸಿಂಧುದುರ್ಗದ ಕುಡಾಲ್ ಜಿಲ್ಲಾ ಹಿರಿಯ ನಾಗರಿಕರ ಸಂಘ ಮತ್ತು ಜಿಲ್ಲಾ ಪೋಲೀಸ್ ಇಲಾಖೆಯ ವತಿಯಿಂದ ಅಂತರಾಷ್ಟ್ರೀಯ ಜಾಗತಿಕ ಹಿರಿಯ ನಾಗರಿಕರ ದಿನಾಚರಣೆಯ ಸಂದರ್ಭ ಕುಡಾಲ್‌ನ ಮರಾಠಾಭವನದಲ್ಲಿ ನಡೆದ ಅದ್ದೂರಿ ಕಾರ್ಯಕ್ರಮದಲ್ಲಿ ಕಟಪಾಡಿ ವೆಂಟರಮಣ ರಾವ್ ಇವರನ್ನು ಶಾಲು, ಹಾರ, ಫಲ ಪುಷ್ಪ, ಸ್ಮರಣಿಕೆಯೊಂದಿಗೆ ಸನ್ಮಾನಿಸಲಾಯಿತು. ಜಿಲ್ಲಾ ಹಿರಿಯ ನಾಗರಿಕ ವೇದಿಕೆ ಮತ್ತು ಜಿಲ್ಲಾ ಪೋಲಿಸ್ ಇಲಾಖೆಯ ಪದಾಧಿಕಾರಿಗಳು ಉಪಸ್ಥಿತರಿದ್ದು ಶುಭ ಹಾರೈಸಿದರು.

ಶ್ರೀ ಕೆ ವೆಂಕಟರಮಣರಾಯರು ಉಡುಪಿ ತಾಲೂಕು ಕಟಪಾಡಿ ಮೂಡಬೆಟ್ಟು ಗ್ರಾಮದವರಾಗಿದ್ದು, ಚಿಕ್ಕ ವಯಸ್ಸಿನಲ್ಲಿಯೇ ಹೋಟೇಲು ಉದ್ಯಮದಲ್ಲಿ ಆಸಕ್ತಿ ಹೊಂದಿ ಉಡುಪಿ ಮಾತ್ರವಲ್ಲದೆ ಮಹಾರಾಷ್ಟ್ರದ ಕುಡಾಲಿನಲ್ಲಿ ಹೋಟೇಲ್ ತ್ರಿವೇಣಿ ಸ್ಥಾಪನೆ ಮಾಡಿ ಅದರಲ್ಲಿ ಯಶಸ್ಸನ್ನು ಪಡೆದರು. ತಮ್ಮ ನಿಸ್ವಾರ್ಥ ಸೇವೆ ಹಾಗೂ ಸಾತ್ವಿಕ ಸ್ವಭಾವದಿಂದ ಎಲ್ಲರೊಂದಿಗೆ ಸೌಹಾರ್ದತೆಯಿಂದ ಇದ್ದು, ಕುಡಾಲ್ ಆಸುಪಾಸಿನಲ್ಲಿ ಪ್ರಭಾವಿ ವ್ಯಕ್ತಿಯಾಗಿದ್ದರು. ಸದ್ಯ ತಮ್ಮ ಉದ್ಯಮದಿಂದ ನಿವೃತ್ತಿ ಪಡೆದುಕೊಂಡಿದ್ದರೂ ಉತ್ತಮ ಆರೋಗ್ಯಕ್ಕಾಗಿ ಯೋಗಾಭ್ಯಾಸ ಮಾಡಿ ಯೋಗ ಶಿಕ್ಷಕರಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿಯೂ ಇವರು ಯೋಗ ತರಬೇತಿಯ ಶಿಬಿರವನ್ನು ನಡೆಸಿಕೊಟ್ಟ ಉದಾಹರಣೆಗಳಿವೆ. ನಮ್ಮ ಸಮಾಜದ ಹಿರಿಯ ವ್ಯಕ್ತಿತ್ವದ ಶ್ರೀ ವೆಂಕಟರಮಣರಾಯರಿಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.

## ಸೀಮೋಲ್ಲಂಘನ

■...7ನೇ ಪುಟದಿಂದ

ತಾ.22-05-2016: ಬ್ಯಾಂಗ್ ಕೋಕ್ (ಥ್ಯಾಲೇಂಡ್)ನಲ್ಲಿ ನಮ್ಮ ಪ್ರಯಾಣದ ಅಂತಿಮ ದಿನ. ಗೈಡ್ ನೀನಮ್ಮನ ಸಲಹೆಯಂತೆ, ಬೆಳಗಿನ ಟಿಫಿನ್ ಮುಗಿಸಿ ಶಾಪಿಂಗ್‌ಗೆ (ಬೇಕಾದ ವಸ್ತುಗಳು ಕಡಿಮೆ ಬೆಲೆಯಲ್ಲಿ ಸಿಗುವ ಕಾರಣ) ಹೊರಟು, ಎಲ್ಲರೂ ಒಂದಲ್ಲ-ಒಂದು ವಸ್ತುಗಳನ್ನು ತಮ್ಮ ಮಕ್ಕಳಿಗೆ ಮೊಮ್ಮಕ್ಕಳಿಗೆ, ಹಿರಿಯರಿಗೆ, ಸ್ನೇಹಿತರಿಗೆ ಖರೀದಿಸಿ ಹಿಂತಿರುಗಿ ಪ್ಯಾಕಿಂಗ್ ರೆಡಿ ಮಾಡಿ, 12 ಗಂಟೆ ಒಳಗೆ ರೂಂ ಖಾಲಿ ಮಾಡಬೇಕಾಗಿದ್ದರಿಂದ, ಲಗ್ಗೇಜನ್ನು ಹೋಟೇಲ್‌ನ ಸ್ವಾಗತ ಕೌಂಟರಿನ ಪಕ್ಕದಲ್ಲಿಟ್ಟು ಊಟಕ್ಕೆ ತೆರಳಿದೆವು. ಅಲ್ಲೇ ವಿರಮಿಸುತ್ತಾ, ಸಂಜೆ 4.30 ಯಾಗುತ್ತಲೇ ನೀನಾ ಮೇಡಂ ಎರಡು ವಾಹನಗಳೊಂದಿಗೆ ಹಾಜರಾಗಿ ''ಸುವರ್ಣಭೂಮಿ'' ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕರಕೊಂಡು ಹೊರಟರು- ನಿಲ್ದಾಣದ ಒಳ ಪ್ರವೇಶಿಸುತ್ತಿದ್ದಂತೆ ''ಸಮುದ್ರ ಮಥನದ'' ದೊಡ್ಡ ಪ್ರತಿಮೆ ನಮಗೆ ಎದುರಾಯಿತು. ಭಾರತದಿಂದ, ಥೈಲೇಂಡ್-ಮಲೇಶ್ಯಾ-ಸಿಂಗಾಪುರಗಳಿಗೆ ಬರುವ ಪ್ರವಾಸಿಗರನ್ನು ಆತ್ಮೀಯವಾಗಿ ಈ ಮೂರು ದೇಶದವರೂ ಸ್ವಾಗತಿಸುತ್ತಾರೆ. ವಿದಾಯ ಕೋರುವಾಗ ನಮ್ಮಂತೆ ಅವರು ಭಾವುಕರಾಗುತ್ತಾರೆ. ನಮ್ಮ ಗೈಡ್ ನೀನಾಳ ನಿಜನಾಮವಿಧೇಯ ಸೀತಾರತ್ನ. ಅವಳ ಇಂಗ್ಲೀಷ್ ಭಾಷೆಯನ್ನು ಕಷ್ಟಪಟ್ಟು ಅರ್ಥಮಾಡಿಕೊಂಡ ನಮ್ಮನ್ನು ಬಹಳ ಪ್ರೀತಿಯಿಂದ ಗೌರವದಿಂದ ಮಾರ್ಗದರ್ಶನ ಮಾಡಿದ್ದಾಳೆ. ಅವಳ ಗಂಡ ಥ್ಯಾರಾಜನ ಸೆಕ್ಯುರಿಟಿ ಗಾರ್ಡ್ ಆಗಿದ್ದಾನೆ. ಮಗನಿಗೆ (17 ವರ್ಷ), 21 ವರ್ಷದ ಸೊಸೆಯನ್ನು ತರುವ ಸಿದ್ಧಳಿದ್ದಾಳೆ. ಅವರೀರ್ವರನ್ನೂ ನಮ್ಮೊಂದಿಗೆ ವಾಹನಗಳಲ್ಲಿ ಕರಕೊಂಡು ಬರುತ್ತಾ ಮಾರ್ಗದರ್ಶಿಗಳಾಗಲು ತರಬೇತಿ ಕೊಡುತ್ತಿದ್ದಾಳೆ. ನಮ್ಮ ಪ್ರಧಾನಮಂತ್ರಿ ಮೋದಿಯರ ಬಗ್ಗೆ ತಿಳಿದುಕೊಂಡಿದ್ದಾಳೆ. ವಿದ್ಯಾಭ್ಯಾಸ ಕಮ್ಮಿ ಇದ್ದರೂ, ಮಾನವೀಯತೆ ಇದ್ದು ಬೌದ್ಧಧರ್ಮವನ್ನು ನಿಷ್ಠೆಯಿಂದ ಆಚರಿಸುತ್ತಾಳೆ, ನನ್ನ ಮೊಮ್ಮಕ್ಕಳಂತೂ ಮಲೇಷಿಯಾದ ಗೈಡ್ ಮಲ್ಲಿಕಾ ಹಾಗೂ ಥ್ಯಾ ಗೈಡ್ ನೀನಾಳನ್ನು ಬಹಳ ಹಚ್ಚಿಕೊಂಡಿದ್ದಳು. ಅಗಲುವಾಗ ಆಗುವ ವೇದನೆ ಕ್ಷಣಕಾಲವಾದರೂ, ನೆನಪು ಶಾಶ್ವತ! ಶ್ರೀಮತಿ ಸೀತಾರತ್ನ ಯಾನೆ ನೀನಾಳಿಗೆ ಗುಡ್ ಬೈ ಹೇಳಿ ವಿಮಾನಕ್ಕೇರಲು ರೆಡಿಯಾದೆವು. ಶ್ರೀಲಂಕನ್ ವಿಮಾನದಲ್ಲಿ 10 ಗಂಟೆಗೆ ಹೊರಟವರು ರಾತ್ರಿ 12ಕ್ಕೆ ಕೊಲಂಬೋ ತಲಪಿ, ಅವರದ್ದೇ ಇನ್ನೊಂದು ವಿಮಾನದಲ್ಲಿ ಬೆಳಗ್ಗೆ 2.30ಗೆ ಬೆಂಗಳೂರು ತಲಪಿದೆವು. ಸುಮಾರು 3.30 ತಾಸು ಕಾದುಕುಳಿತು Jet Air ವಿಮಾನದ ಮೂಲಕ ಬಜಪೆಯಲ್ಲಿ ಇಳಿದು, ಉಡುಪಿ ಸೇರುವಾಗ ಗಂಟೆ 9 ಆಗಿತ್ತು. ಮನಸ್ಸು ನಿರಾಳವಾಗಿ, ಯಾವುದೇ ಸಮಸ್ಯೆ ತೊಂದರೆಗಳಿಲ್ಲದೆ ಯಥಾಸ್ಥಾನ ಸೇರಿಸಿದ, ಉಡುಪಿ ಶ್ರೀಕೃಷ್ಣನಿಗೆ ನಮೋ ನಮೋ:! ಎಂದೆವು.

## ವರದಿ ಮುಗಿಸುವ ಮುನ್ನ...

ನಮ್ಮ ವಾತಿಕಾ ಟ್ರಾವೆಲ್ಸ್‌ನವರು, ಮೂರು ದೇಶಗಳಲ್ಲೂ ಬಹಳ ಉತ್ತಮ ಹೋಟೇಲ್‌ಗಳಲ್ಲಿ, ವಸತಿ/ಊಟ ಸೌಕರ್ಯ ಒದಗಿಸಿದ್ದಾರೆ, ಭಾರತೀಯ ಊಟ ಸೌಕರ್ಯ ಒದಗಿಸಿದ್ದಾರೆ. ಭಾರತೀಯ ಊಟದೊಂದಿಗೆ ಸಾಕಷ್ಟು ಹಣ್ಣು ಹಂಪಲು/ತರಕಾರಿ ವ್ಯವಸ್ಥೆ ಇದೆ. ಟಾಯ್‌ಲೆಟ್‌ಗಳಲ್ಲಿ ಟಿಶ್ಯೂಪೇಪರ್ ಉಪಯೋಗಿಸಬೇಕಾದ ಕಾರಣ, ಪ್ಲಾಸ್ಟಿಕ್ ಟಂಬ್ಲರ್ ಅವಶ್ಯವಾಗಿ ಒಯ್ಯಬೇಕು. ಸಸ್ಯಾಹಾರಿಗಳು ಬಫೆಯಲ್ಲಿ ಆಹಾರ ತೆಗೆಯುವಾಗ ಸ್ವಲ್ಪ ಜಾಗ್ರತೆ ವಹಿಸಿ, ಕೆಲವು ಕಡೆ ಮಾಂಸಾಹಾರ ಕೂಡಾ ಇಟ್ಟಿರುತ್ತಾರೆ. ಇನ್ನು ಎಲಿವೇಟರ್ಸ್‌ಗಳಲ್ಲಿ ಸಂಚರಿಸುವಾಗ (ವಿಮಾನ ನಿಲ್ದಾಣ/ಶಾಪಿಂಗ್ ಸೆಂಟರ್‌ಗಳಲ್ಲಿ) ಪರದೇಶಕ್ಕೆ ಹೊಸದಾಗಿ ಪ್ರಯಾಣಿಸುವವರು, ಸ್ವಲ್ಪ ಜಾಗ್ರತೆ ವಹಿಸಿ ಜೆಂಟಿಂಗ್ ಹೈಲ್ಯಾಂಡಲ್ಲಿ ಮೇಲೆ ಕೆಳಗೆ ಹೋಗಿ ಇಳಿಯುವಾಗ ಕನಿಷ್ಠ 50ರಿಂದ 60 ಎಲಿವೇಟರ್ಸ್‌ಗಳಲ್ಲಿ ನಡೆಯಬೇಕಾಗುತ್ತದೆ. ವಸ್ತುಗಳನ್ನು ಖರೀದಿ ಮಾಡುವಾಗಲೂ ಜಾಗ್ರತೆ ವಹಿಸಿರಿ. ಹೋಟೇಲ್‌ಗಳಲ್ಲಿ ಬೆಳಗ್ಗೆ ಎದ್ದಕೂಡಲೇ ಚಾ/ಕಾಫಿಗೆ ಕೊಡುವ ಸಾಮಾಗ್ರಿಗಳಲ್ಲಿ ಹಾಲಿನಹುಡಿ ಸಾಕಾಗುವುದಿಲ್ಲ. ಸಾಧ್ಯವಾದರೆ ನಿಮ್ಮ Tour ಕಿಟ್‌ನಲ್ಲಿ ಅದೂ ಇರಲಿ. ಪಾಸ್ ಪೋರ್ಟ್, ಹೆಚ್ಚಿನ ಹಣ ಇತ್ಯಾದಿ ಬೆಲೆಬಾಳುವ ಸಾಮಾನುಗಳನ್ನು Hotel ಕೌಂಟರಿನಲ್ಲಿ ಅಥವಾ ರೂಮಿನಲ್ಲಿರುವ ಭದ್ರತಾ ಪೆಟ್ಟಿಗೆಯಲ್ಲಿಡಿ. ಅಮೇರಿಕನ್ ಡಾಲರ್, ಮಲೇಷ್ಯದ ರಿಂಗೆಟ್ಸ್, ಸಿಂಗಾಪುರ ಡಾಲರ್, ಥ್ಯಾಲೇಂಡಿನ ಬಾತ್ ಇತ್ಯಾದಿ ಕರೆನ್ಸಿಗಳನ್ನು ಬದಲಾವಣೆ ಮಾಡುವಾಗ ಬ್ಯಾಂಕ್‌ಗಳಲ್ಲಿ ಅಥವಾ ಹೆಸರುವಾಸಿಯಾದ Exchange ಕಂಪೆನಿಗಳಲ್ಲಿ ವ್ಯವಹರಿಸಿ ಇವೆಲ್ಲಾ ಮೊದಲ ಬಾರಿ ಪ್ರಯಾಣಿಸುವವರಿಗೆ ಸಲಹೆಗಳು.

ಇನ್ನು ನಮ್ಮ ವಾತಿಕಾ ಇಂಟರ್ನೇಶನಲ್ ಟ್ರಾವೆಲ್ಸ್‌ರವರ ಧ್ಯೇಯ ವಾಕ್ಯ we care for you alwaysದಂತೆ ಈ ಪ್ರಯಾಣವನ್ನು ಅಚ್ಚುಕಟ್ಟಾಗಿ ನಿಭಾಯಿಸಿ ನಮ್ಮ ಪ್ರವಾಸದ ಸಿಹಿ ನೆನಪುಗಳು ಸದಾ ಮನದಲ್ಲಿರುವಂತೆ ಮಾಡಿದ ಅವರಿಗೆ ವಂದನೆಗಳು! ಗೈಡ್‌ಗಳ ಮುಖಾಂತರ ಸಂಗ್ರಹಿಸಿದ ಮಾಹಿತಿಗಳು ತಪ್ಪಾಗಿದ್ದಲ್ಲಿ ಕ್ಷಮಿಸಿ, ತಿಳಿದವರು ಸರಿಪಡಿಸಿಕೊಳ್ಳಿ.

ಇತ್ತೀಚಿಗೆ ಪತ್ರಿಕಾ ಪ್ರಕಟಣೆಯೊಂದರಲ್ಲಿ ಭಾರತ-ಥ್ಯಾಲೇಂಡ್-ಮ್ಯಾನ್ಮಾರ್ ಬೆಸುಗೆಗೆ 1400.ಕಿ.ಮೀ ರಸ್ತೆ 18 ತಿಂಗಳ ಒಳಗಾಗಿ ನಿರ್ಮಾಣ ಕಾರ್ಯ ಮುಗಿಯಲಿಯಂತೆ. ಇದರಿಂದ ಮೂರು ದೇಶಗಳ ವ್ಯಾಪಾರ ವಹಿವಾಟು ಅಭಿವೃದ್ಧಿ ಹೊಂದಿ ದೇಶಗಳ ಸಂಸ್ಕೃತಿ-ಭಾಷಾ ಸೊಗಡಿನ ವಿನಿಮಯಕ್ಕೆ ಸಹಕಾರಿ ಯಾಗಲಿದೆಯಂತೆ. ಭಾರತದಿಂದ 10 ಲಕ್ಷಕ್ಕೂ ಹೆಚ್ಚು ಮಂದಿ ಭಾರತೀಯರು ಥ್ಯಾಲೇಂಡಿಗೆ ಕಳೆದ ವರ್ಷ ಭೇಟಿ ನೀಡಿದ್ದಾರಂತೆ. ಇದು ಪ್ರವಾಸೋದ್ಯಮಕ್ಕೆ ಬಹಳ ಸಹಕಾರಿಯಾಗಲಿದೆ. ಇದರೊಂದಿಗೆ ಬಾರತ ದೇಶವು ಇನ್ನೂ ಬೆಳಗಲಿ.

**ಶ್ರೀ ಮಾತಾ ಜ್ಯೋತಿಷ್ಯಾಲಯ**

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜ್ಯೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

# ಶ್ರೀ ಶಾರದಾ ಮಂಟಪದಲ್ಲಿ ಜನಮನ ರಂಜಿಸಿದ ನವರಾತ್ರಿ ಯಕ್ಷಗಾನ





ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಉಡುಪಿ ಇವರ ವತಿಯಿಂದ ಪ್ರತಿವರ್ಷದಂತೆ ವಿಜಯದಶಮಿಯಂದು ನೆರವೇರಿದ ಯಕ್ಷಗಾನ ಪ್ರದರ್ಶನವು ಯಶಸ್ವಿಯಾಗಿ ನೋಡುವವರ ಮನಸೂರೆಗೊಂಡಿತು. ಒಟ್ಟು ಮೂರು ಪ್ರಸಂಗಗಳನ್ನು ಪ್ರದರ್ಶಿಸಿದ್ದರೂ, ಯಕ್ಷಗಾನದ ವೇಗದ ನಡೆ, ಕಲಾವಿದರ ಚಕ್ಷತೆ ಹಾಗೂ ಹಿಮ್ಮೇಳದ ಸಾರ್ಥಕ ಸಾರಥ್ಯದಿಂದ ಎಲ್ಲಿಯೂ ಸಪ್ಪೆಯಾಗದೆ ಕೊನೆ ತನಕ ಪ್ರೇಕ್ಷಕರನ್ನು ಹಿಡಿದಿಡುವಲ್ಲಿ ಸಹಕಾರಿಯಾಯಿತು.

**ಧ್ರುವ ಚರಿತ್ರೆ :** ಪ್ರಥಮ ಪ್ರಸಂಗವಾದ ಧ್ರುವ ಚರಿತ್ರೆಯಲ್ಲಿ ಧ್ರುವನಾಗಿ ಒಡ್ಡೋಲಗಕ್ಕೆ ಬಂದ ವೃಂದಾ ಕೆ. ರಾವ್ ಉತ್ತಮವಾಗಿ ಹಾಗೂ ಕುಬೇರನಾಗಿ ಶ್ರೀನಿಧಿ, ಕಿರಾತ ರಾಜನಾಗಿ ಅನುಶ್ರೀ ತಮ್ಮ ಅತ್ಯುತ್ತಮ ಹೆಜ್ಜೆಗಾರಿಕೆ ಮತ್ತು ಮಾತುಗಾರಿಕೆಯಿಂದ ಪುರುಷರಂತೆಯೇ ಪ್ರಸಂಗ ಮುನ್ನಡೆಸುವಲ್ಲಿ ಯಶಸ್ವಿಯಾದರು. ಯಕ್ಷಗಾನ ಕಲಿಕೆಯ ವಿದ್ಯಾರ್ಥಿಗಳಾದ ವಿಘ್ನೇಶ ರಾವ್.ಸಿ ಮತ್ತು ಆದಿತ್ಯ ರಾವ್ ವನಪಾಲಕರು ಮತ್ತು ಕಿರಾತ ಪಡೆಯವರಾಗಿ, ಸ್ಕಂದ ಕುಮಾರ್ ಮಾಯಾಕೋವಿದನಾಗಿ, ಶ್ರಾವ್ಯ ರಾವ್ ಸ್ವಯಂಭೂ ಮುನಿಯಾಗಿ ತಮ್ಮ ಪಾತ್ರಗಳನ್ನೂ ನಿರ್ವಹಿಸಿದ್ದು ಭವಿಷ್ಯದಲ್ಲಿ ಉತ್ತಮ ವೇಷಧಾರಿಗಳಾಗುವ ಲಕ್ಷಣ ತೋರಿದರು. ಆ ಪ್ರಸಂಗದಲ್ಲಿ ಸ್ತ್ರೀವೇಷದಲ್ಲಿ ಸುರುಚಿಯಾಗಿ ಮಿಂಚಿದ ಕಾರ್ತಿಕ್ ರಾವ್ ಸಿ. ತನ್ನ ಪಾತ್ರಕ್ಕೆ ತಕ್ಕ ಗೌರವ ತಂದುಕೊಟ್ಟರು.

**ಧರ್ಮಾಂಗದ ದಿಗ್ವಿಜಯ:** ಈ ಪ್ರಸಂಗವು ಅತ್ಯಂತ ಪಟಪಟನೆ ಮುಂದುವರಿದು ಪ್ರಸಂಗದ ಕೊನೆಯವರೆಗೂ ಪ್ರೇಕ್ಷಕರ ನಿರೀಕ್ಷೆಯನ್ನು ಸತ್ಯವಾಗುವಂತೆ ಮಾಡಿತು. ರುಕ್ಮಾಂಗದನಾಗಿ ಅರವಿಂದ ಕುಮಾರ್ ಯಶಸ್ವಿಯಾದರೆ, ಧರ್ಮಾಂಗದನಾಗಿ ವೈ. ವ್ಯಾಸರಾವ್ ತನ್ನ ಹೆಜ್ಜೆಗಾರಿಕೆ ಹಾಗೂ ಅಬ್ಬರದ ನಡೆಯಿಂದ ರಂಗವನ್ನು ಸೂರೆಗೈದರು. ಧರ್ಮಾಂಗದನನ್ನು ಎದುರಿಸುವ ಭರತನಾಗಿ ಸಂತೋಷ್ ರಾವ್, ಕಂಬಲಾಕ್ಷನಾಗಿ ವೈ. ಅಜಿತ್ ರಾವ್, ಬಲಿಚಕ್ರವರ್ತಿಯಾಗಿ ಕೃಷ್ಣ ಕುಮಾರ್ ರಾವ್ ತಮ್ಮ ಪಾತ್ರಗಳಿಗೆ ತಕ್ಕಂತೆ ಅರ್ಥಗಾರಿಕೆ ಹಾಗೂ ಕುಣಿತಗಳಿಂದ ಯಕ್ಷಗಾನದ ಮೆರಗನ್ನು ತೋರಿದರು.

ದೂತನಾಗಿ ಕಾರ್ತಿಕ್ ರಾವ್ ಸಿ., ನಾರದನಾಗಿ ಶ್ರಾವ್ಯ ರಾವ್, ವಿಷ್ಣುವಾಗಿ ವೈ. ಮೋಹನ್ ರಾವ್ ಸಮಯೋಚಿತವಾಗಿ ತಮ್ಮ ಪಾತ್ರ ನಿರ್ವಹಣೆ ಮಾಡಿದರು.

**ಕರ್ಣಾರ್ಜುನ ಕಾಳಗ:** 3ನೇ ಪ್ರಸಂಗದಲ್ಲಿ ಕರ್ಣನಾಗಿ ಟಿ.ವಿಶ್ವನಾಥ ಶ್ಯಾನುಭೋಗ್, ಶಲ್ಯನಾಗಿ ವೈ. ವಾಗೀಶ ರಾವ್, ಶ್ರೀ ಕೃಷ್ಣನಾಗಿ ಶ್ರೀಕಾಂತ ರಾವ್, ಅರ್ಜುನನಾಗಿ ವೈ. ವಾಗೀಶ ರಾವ್, ಉತ್ತಮ ವೇಷಧಾರಿಗಳಾಗಿ ತಮ್ಮ ಪಾತ್ರಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದರು. ಬ್ರಾಹ್ಮಣರಾಗಿ ಹಿರಿಯ ಕಲಾವಿದರಾದ ಮ.ನಾ. ಹೆಬ್ಬಾರರು ಪೂರಕ ಮಾತಿನಿಂದ ಸಭೆಯನ್ನು ರಂಜಿಸಿದರು.

ಹಿಮ್ಮೇಳದಲ್ಲಿ ಸಹಕರಿಸಿದ ಚಂದ್ರಕಾಂತ ರಾವ್ ಮೂಡುಬೆಳ್ಳೆ ತಮ್ಮ ಸಿಹಿಕಂಠದಿಂದ ಉತ್ತಮ ಭಾಗವತರಾಗಿ ಎಲ್ಲರನ್ನು ರಂಜಿಸಿದರೆ, ಚಂಡೆ-ಮದ್ದಳೆಯಲ್ಲಿ ಕ್ರಮವಾಗಿ ಸತೀಶ್ ಉಪಾಧ್ಯಾಯ ಮತ್ತು ರತ್ನಾಕರ ಆಚಾರ್ಯ ಯಕ್ಷಗಾನದ ಶ್ರೇಷ್ಠತೆಗೆ ಕಾರಣರಾದರು.

ಗುರು ಶ್ರೀ ಮಂಜುನಾಥ ಕುಲಾಲ್‌ರ ನಿರ್ದೇಶನದಲ್ಲಿ ಸಂಜೆ 6.00 ಗಂಟೆಯಿಂದ 10 ಗಂಟೆಯವರೆಗೆ ನಡೆದ ಈ ಯಕ್ಷಗಾನ ಪ್ರದರ್ಶನವು ಸ್ಥಾನಿಕ ಸಮಾಜದ ಹಿರಿಯ ಕಿರಿಯ ಕಲಾವಿದರನ್ನೊಳಗೊಂಡು ಎಲ್ಲಾ ರೀತಿಯಲ್ಲಿಯೂ ಯಕ್ಷಗಾನ ಕಲೆಯ ಪೋಷಣೆ ಮಾಡಿಕೊಂಡಿ ಬಂದಿರುವುದು ಸ್ತುತ್ಯಾರ್ಹವಾಗಿದೆ.

ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರ ಹೆಸರಿನಿಂದ ಪ್ರಾರಂಭಗೊಂಡು ಕಳೆದ ಹತ್ತು ವರ್ಷಗಳಲ್ಲಿ ಹಲವಾರು ಪೌರಾಣಿಕ ಪ್ರಸಂಗಗಳನ್ನು ಅಭ್ಯಾಸ ಮಾಡಿ ಶ್ರೀ ಶಾರದಾ ಮಂಟಪ ಮಾತ್ರವಲ್ಲದೆ ಪ್ರತಿವರ್ಷ ಇಂದ್ರಾಳಿಯಲ್ಲಿ ಶಿವರಾತ್ರಿಗೆ, ಉಡುಪಿ, ಪಡುಬಿದ್ರೆಯಲ್ಲಿ ನಡೆದ ಸ್ಥಾನಿಕ ಸಮಾವೇಶದ ಸಂದರ್ಭದಲ್ಲಿ, ಗಣೇಶೋತ್ಸವ ಮತ್ತು ಇತರ ಸಂದರ್ಭಗಳಲ್ಲಿ ಹೆಬ್ರಿ. ಮಟ್ಟು, ದೊಡ್ಡಣಗುಡ್ಡೆ, ಬನ್ನಂಜೆ ಮೊದಲಾದ ಕಡೆ ಅಲ್ಲದೆ, ಮುಂಬೈಯಲ್ಲಿ ನಡೆದ ಮುಂಬೈ ಸ್ಥಾನಿಕ ಸಂಘದ ಶತಮಾನೋತ್ಸವ ಕಾರ್ಯಕ್ರಮದಲ್ಲಿಯೂ ಪ್ರದರ್ಶನ ನೀಡಿದ ಕೀರ್ತಿಯನ್ನು ಹೊಂದಿದೆ.

ವಿದ್ಯಾರ್ಥಿಗಳು, ಆಸಕ್ತ ಸಮಾಜ ಬಾಂಧವರು ಶ್ರೀ ಶಾರದಾ ಮಂಟಪದಲ್ಲಿ ನಡೆಯುವ ಯಕ್ಷಗಾನ ತರಬೇತಿ ಶಿಬಿರದಲ್ಲಿ ಭಾಗವಹಿಸಿ ತಾವೂ ಕಲಾಪೋಷಣೆಗೆ ಅವಕಾಶ ಪಡೆಯಲು ಅವಕಾಶವಿದೆ ಎಂದು ಈ ಸಂಸ್ಥೆಯ ಕಲಾವಿದರ ಆಶಯವಾಗಿದೆ.

ಶ್ರೀ ಶಾರದಾ ಯಕ್ಷಗಾನ ಕಲಾವಿದರ ಈ ಕಲಾಕೃಷಿಯು ಇದೇ ರೀತಿ ಮುನ್ನಡೆಯಲಿ, ಸಮಾಜದಲ್ಲಿ ಇನ್ನಷ್ಟು ಕಲಾವಿದರು ರೂಪುಗೊಳ್ಳಲಿ, ಆ ಮೂಲಕ ಯಕ್ಷಗಾನದ ಕಲೆಯು ಎತ್ತರಕ್ಕೆ ಬೆಳೆಯಲಿ ಎಂದು ನಾವೆಲ್ಲರೂ ಶುಭ ಹಾರೈಸೋಣ.

**– ಕೆ. ವೇಣುಗೋಪಾಲ ರಾವ್, ಅಂಬಲಪಾಡಿ.**

# ಶ್ರೀ ಶಾರದಾ ಮಂಟಪದಲ್ಲಿ ವಿಜಯದಶಮಿಯಂದು ಜರಗಿದ ವಿವಿಧ ಸ್ಪರ್ಧೆಗಳು





ಶ್ರೀಶಾರದಾ ಮಂಟಪದಲ್ಲಿ ತಾ.11-10-2016 ರಂದು ವಿಜಯದಶಮಿಯ ಅಂಗವಾಗಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳು ನೆರವೇರಿದವು. ಭಕ್ತಿಗೀತೆ, ಚಿತ್ರರಚನೆ, ರಂಗವಲ್ಲಿ, ಶಂಖ ಊದುವುದು, ಕನಕಧಾರಾ ಸ್ತೋತ್ರ ಮತ್ತು ಚೂರ್ಣಿಕೆ ಹೇಳುವುದು ಇತ್ಯಾದಿ ಸಾಂಸ್ಕೃತಿಕ ಸ್ಪರ್ಧೆಗಳನ್ನು ಮಕ್ಕಳು, ಯುವಕರು, ಪುರುಷರು, ಮಹಿಳೆಯರು ಮತ್ತು ಸಾಮಾನ್ಯ ವರ್ಗ ಹೀಗೆ ವಿವಿಧ ವಿಭಾಗಗಳಲ್ಲಿ ನಡೆಸಲಾಯಿತು. ಸಾಂಸ್ಕೃತಿಕ ವೇದಿಕೆ, ಯುವ ವೇದಿಕೆ ಮತ್ತು ಮಹಿಳಾ ವೇದಿಕೆಯವರ ಮುಂದಾಳತ್ವದಲ್ಲಿ ಇತರ ಸಮಾಜ ಬಾಂಧವರ ಸಹಕಾರದೊಂದಿಗೆ ಸ್ಪರ್ಧೆಗಳು ನಡೆದವು. ಈ ಸ್ಪರ್ಧೆಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ಹಾಗೂ ಉದಯಚಂದ್ರ ಹಾಗೂ ಶ್ರೀ ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪ್ರಶಸ್ತಿಗಳನ್ನು ಸಭಾಕಾರ್ಯಕ್ರಮದಲ್ಲಿ ಅತಿಥಿಗಳಾದ ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್ ಹಾಗೂ ಶ್ರೀಮತಿ ಪದ್ಮಾಕ್ಷಿ ಇವರು ವಿತರಿಸಿದರು. ಸಾಂಸ್ಕೃತಿಕ ಸ್ಪರ್ಧೆಯ ಬಹುಮಾನಗಳನ್ನು ಶ್ರೀ ವೈ. ಮೋಹನ ರಾವ್ ಮತ್ತು ರಂಗವಲ್ಲಿ ಸ್ಪರ್ಧೆಯನ್ನು ಶ್ರೀ ಟಿ. ಜಗದೀಶ ರಾವ್ ಪ್ರಾಯೋಜಿಸಿದ್ದರು.

ಡಾ। ರವೀಂದ್ರ ನಾಥ ರಾವ್, ವೈ.ಮೋಹನ ರಾವ್, ಶ್ರೀಮತಿ ಮೀರಾ, ಶ್ರೀ ಕೃಷ್ಣಕುಮಾರ್ ಮಟ್ಟು, ಶ್ರೀ ಮಹೇಶ್ ರಾವ್‌ರವರು ತೀರ್ಪುಗಾರರಾಗಿ ಸಹಕರಿಸಿದರು.

ಇದೇ ಸಂದರ್ಭದಲ್ಲಿ ಉದಯಚಂದ್ರ ಪುರಸ್ಕಾರ ಮತ್ತು ದಿ। ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ಪುರಸ್ಕಾರವನ್ನು ವಿತರಿಸಲಾಯಿತು.

**ಉದಯಚಂದ್ರ ಪುರಸ್ಕಾರ :**

ಎಸ್.ಎಸ್.ಎಲ್.ಸಿ. : ಶ್ರೀ ಲಕ್ಷ್ಮೀ

ಪಿಯುಸಿ ವಿಜ್ಞಾನ : ಶ್ರದ್ಧಾ ಎನ್.ಎಮ್.

**ದಿ। ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ಪುರಸ್ಕಾರ :**

ಸ್ವಾತಿ ಹೆಬ್ಬಾರ್

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ "ನಾಡಹಬ್ಬ"




ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.16.10.2016 ರಂದು "ನಾಡಹಬ್ಬ"ವನ್ನು ಅದ್ದೂರಿಯಲ್ಲಿ ಆಚರಿಸಲಾಯಿತು. ವಿವಿಧ ಪಾರಾಯಣಗಳು, ಛದ್ಮವೇಷ ಸ್ಪರ್ಧೆ, ಚಿತ್ರ ಬಿಡಿಸುವ ಸ್ಪರ್ಧೆ, ಹುಲಿಕುಣಿತ ಸ್ಪರ್ಧೆ, ಕರಕುಶಲ ತರಬೇತಿ, ಪ್ರತಿಭಾ ಪುರಸ್ಕಾರ ಬೆಳಗಿನ ಅವಧಿಯಲ್ಲಿ ನಡೆದವು. ಮಧ್ಯಾಹ್ನ ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿಯ ಸದಸ್ಯರಿಂದ " ಸಹಸ್ರ ಕವಚ ಮೋಕ್ಷ" ಯಕ್ಷಗಾನ ನಡೆಯಿತು. ಶ್ರೀ ಕಾರ್ತಿಕ್ ಕುಡುಪು, ಶ್ರೀ ರಘುವೀರ್ ಪೆರ್ಡೂರು, ಶ್ರೀ ಸಂಜಯ ಕುಮಾರ್ ಪಲಿಮಾರ್, ಶ್ರೀ ನಾಗರಾಜ್ ವರ್ಕಾಡಿ ಸ್ಪರ್ಧೆಗಳ ವ್ಯವಸ್ಥೆಗಳಲ್ಲಿ ಸಹಕರಿಸಿದರು. ಯುವ ವೇದಿಕೆಯ ಶ್ರೀ ಮನೀಶ್ ರಾವ್, ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸುರೇಶ್ ಕುಡುಪು, ಮಹಿಳಾ ವೇದಿಕೆಯ ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಕುಸುಮಾ ನವೀನ್‌ಕುಮಾರ್ ಕಾರ್ಯಕ್ರಮ ಸಂಯೋಜಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ ರಾವ್ ಕಾರ್ಯಕ್ರಮ ನಿರೂಪಿಸಿದರು. ಬಹುಮಾನ ವಿತರಣೆ, ಧನ್ಯವಾದ ಸಮರ್ಪಣೆ, ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್ ವರದಿ:ಶ್ರೀ.ಪಿ.ಶ್ರೀಕಾಂತ ರಾವ್

## ಪಡುಬಿದ್ರಿಯಲ್ಲಿ ಶರನ್ನವರಾತ್ರಿ ಉತ್ಸವ



ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಶರನ್ನವರಾತ್ರಿಯ ಅಂಗವಾಗಿ ಶ್ರೀ ಪ್ರಸನ್ನ ಪಾರ್ವತಿ ದೇವರಿಗೆ ವಿವಿಧ ಅಲಂಕಾರಗಳಿಂದ ಭಕ್ತಾಧಿಗಳ ಅಸಂಖ್ಯ ಪೂಜೆಗಳೊಂದಿಗೆ ಬಹಳ ವಿಜೃಂಭಣೆಯಿಂದ ನವರಾತ್ರಿ ಪೂಜೆಯು ಸಂಪನ್ನಗೊಂಡಿತು. ಶ್ರೀ ಕ್ಷೇತ್ರದಲ್ಲಿ ಶರನ್ನವರಾತ್ರಿ ಮಹೋತ್ಸವದ ಅಂಗವಾಗಿ ತಾರೀಕು 09-10-2016ರ ಆದಿತ್ಯವಾರ ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ನೆರವೇರಿತು. ಅಂದು ಬೆಳಿಗ್ಗೆ 11-30ಕ್ಕೆ ಯಾಗದ ಪೂರ್ಣಾಹುತಿ ಹಾಗೂ 12 ಗಂಟೆಗೆ ಮಹಾಪೂಜೆಯು ಅಸಂಖ್ಯ ಭಕ್ತಾದಿಗಳ ಸಮ್ಮುಖದಲ್ಲಿ ಸಂಪನ್ನಗೊಂಡಿತು. ನಂತರ 500ಕ್ಕೂ ಮೇಲ್ಪಟ್ಟು ಭಕ್ತಾಧಿಗಳು ಅನ್ನಸಂತರ್ಪಣೆಯಲ್ಲಿ ಶ್ರೀದೇವರ ಅನ್ನಪ್ರಸಾದವನ್ನು ಸ್ವೀಕರಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ತಾ.08-10-2016ರಂದು ರಾತ್ರಿ 7 ಗಂಟೆಗೆ ಶ್ರೀ ದುರ್ಗಾಂಬಾ ಮಹಿಳಾ ಯಕ್ಷಗಾನ ಮಂಡಳಿ, ತಡಂಬೈಲು, ಸುರತ್ಕಲ್ ಇವರಿಂದ "ಶಾಂಭವಿ ವಿಜಯ" ಎಂಬ ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮವು ನಡೆಯಿತು.

## "ವಸುಧೆಯೊಳಡಗಿತು ಈ ಕಾಡುಮೇಡು' ಗ್ರಂಥ ಬಿಡುಗಡೆ



"ಚಿಂತನಶೀಲ ಮನಸ್ಸು ಸದ್ವಿಚಾರಗಳ ಮೂಲಕ ಓದುಗರಿಗೆ ಉತ್ತಮ ಹಾಗೂ ಜೀವನಶ್ರೇಷ್ಠ ಮೌಲ್ಯಗಳನ್ನು ತಲುಪಿಸುತ್ತದೆ. ಈ ಮೌಲ್ಯಗಳನ್ನು ರೇಡಿಯೋ ಚಿಂತನಗಳ ರೂಪದಲ್ಲಿ ಗ್ರಂಥಕರ್ತರು ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ" ಎಂಬುದಾಗಿ ಉಡುಪಿಯ ಕೆನರಾ ಹೆಲ್ತ್ ಸೆಂಟರ್‌ನ ಎಂಡೋಸ್ಕೋಪಿಕ್ ಹಾಗೂ ಲೆಪ್ರೋಸ್ಕೋಪಿಕ್ ತಜ್ಞರಾಗಿರುವ ಡಾ। ವೈ. ಸುದರ್ಶನ ರಾವ್ ಅಭಿಪ್ರಾಯಪಟ್ಟರು.

ಅವರು ವೈ. ಮೋಹನ ರಾವ್‌ರವರ 'ವಸುಧೆಯೊಳಡಗಿತು ಈ ಕಾಡುಮೇಡು' ಎಂಬ ರೇಡಿಯೋ ಚಿಂತನಗಳ ಸಂಗ್ರಹ ಗ್ರಂಥವನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು.


ಉಡುಪಿಯ ಕುಂಜಿಬೆಟ್ಟು ಶ್ರೀಶಾರದಾ ಮಂಟಪದ ಜ್ಞಾನಮಂದಿರದಲ್ಲಿ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ 'ಸುಹಾಸಂ' ಸಂಸ್ಥೆಯ ಅಧ್ಯಕ್ಷ ಎಚ್. ಶಾಂತರಾಜ ಐತಾಳರು ಜೀವನಮೌಲ್ಯಗಳನ್ನು ಕಲಿಸುವ ಸಾಹಿತ್ಯದ ಓದು ನೀಡುವ ನೆಮ್ಮದಿ ಅನನ್ಯವಾದುದು ಹಾಗೂ ಅಂತಹ ಓದಿಗೆ ಪ್ರೇರಣೆಯಾಗಬಲ್ಲ ಚಿಂತನಗಳನ್ನು ನೀಡಿದ ಗ್ರಂಥಕರ್ತ ಮೋಹನ ರಾವ್‌ರನ್ನು ಶ್ಲಾಘಿಸಿದರು.

ಅಶ್ವತ್ಥ್ ಭಾರದ್ವಾಜ್ ಕಬ್ಬಿನಾಲೆ, ಎಸ್. ನಿತ್ಯಾನಂದ ಪಡ್ರೆ, ವೈ. ಭುವನೇಂದ್ರ ರಾವ್ ಮತ್ತು ಎಂ.ಕೆ.ಕೃಷ್ಣಯ್ಯ ಅತಿಥಿ ಸ್ಥಾನದಿಂದ ಮಾತನಾಡಿ ಶುಭ ಹಾರೈಸಿದರು.

ಕುಮಾರಿ ದಿಶಾ ಪ್ರಾರ್ಥಿಸಿದರು. ವೈ.ಮೋಹನ ರಾವ್ ಸ್ವಾಗತಿಸಿದರು. ವೈ. ಧೀರಜ್ ರಾವ್ ವಂದಿಸಿದರು. ಬಾರಕೂರಿನ ರಾಮ ಭಟ್ಟ ಸಜಂಗದ್ದೆ ಕಾರ್ಯಕ್ರಮ ನಿರ್ವಹಿಸಿದರು.

ಕಾರ್ಯಕ್ರಮದ ಅಂಗವಾಗಿ ಎಂ.ಕೆ. ಕೃಷ್ಣಯ್ಯ ಅವರು ಸಂಗ್ರಹಿಸಿದ ಅಮೂಲ್ಯ ಸ್ಟ್ಯಾಂಪುಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

## ಚಿಣ್ಣರ ಅಂಗಳ








*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)



**With Best Compliments From :**



SMT. VIDYA & SRI K. VASUDEVA RAO

*Deepika Digital Studio & Video*
*Deepika International Travels*

WE UNDERTAKE

- Studio Portrait
- Digital Creation
- Outdoor Photography Making
- Digital Albums
- Video Coverage (Cinematography)
- Lamination & Frames
- Led Wall, Crane & Spot Mixing
- Air Ticket (Domestic & International)
- Passport Assitance
- Train Tickets
- Bus Tickets
- Attestation Certificate
- Western Union
- Emigration (ECNR)

Opp. Kediyoor Hotel, Near Service Bus Stand, Udupi - 576 101.
E-mail : deepika.tra@gmail.com
Ph : 0820-2520652 / 4295862 Mobile : 9845177795 / 9845650449


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org